

ಆಂತರಿಕ ಪ್ರಸಾರಕ್ಕಾಗಿ ಮಾತ್ರ
ಸಂಪುಟ 4 ಸಂಚಿಕೆ 3
ಮೇ 2011
India ECHOES
ONE WORLD ONE HUMANITY
ಶ್ರೀ ರಾಮಚಂದ್ರ ಮಿಷನ್®

# ಪಂಜಾಬ್ ಪ್ರವಾಸ





## ಚಂಡೀಗಢ

ಗುರುಗಳು ತಮ್ಮ ರಸ್ತೆ ಪ್ರಯಾಣವನ್ನು ಫೆಬ್ರವರಿ 27ರಂದು ದೆಹಲಿಯಿಂದ ಪ್ರಾರಂಭಿಸಿದರು. ಕರ್ನಾಲ್‌ನಲ್ಲಿ ಲಘುವಿರಾಮ ತೆಗೆದುಕೊಳ್ಳಲು ನಿಂತಾಗ ಉತ್ಸಾಹೀ ಅಭ್ಯಾಸಿಗಳು ಅವರನ್ನು ಎದುರುಗೊಂಡರು. ಚಂಡೀಗಢ ತಲುಪಿದೊಡನೆ ನೂರಕ್ಕೂ ಮಿಗಿಲಾಗಿ ಅಭ್ಯಾಸಿಗಳು ಮತ್ತು ಮಕ್ಕಳು ಸ್ವಾಗತ ಕೋರಿದರು. ಆರು ಘಂಟೆಯ ಕಾರು ಪ್ರಯಾಣ ಮಾಡಿ ಆಗಷ್ಟೇ ತಲುಪಿದ್ದರೂ ಸಹ ಗುರುಗಳು ಸಹೋದರರೊಬ್ಬರ ಗೃಹಪ್ರವೇಶ ಮಾಡಿ ಸತ್ಸಂಗ ನಡೆಸಿಕೊಟ್ಟರು.

ಫೆಬ್ರವರಿ 28ರಂದು ಮತ್ತು ಅದರ ಮರುದಿನ ಗುರುಗಳು ಬೆಳಿಗ್ಗೆ ಹೊರಬಂದು ಒಂದು ಘಂಟೆಯ ಕಾಲ ಅಭ್ಯಾಸಿಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಈ ಸಂದರ್ಭವನ್ನು ಗುರುಗಳು ತಮ್ಮ ಎಂದಿನ ಹಾಸ್ಯಪ್ರಜ್ಞೆ ಮತ್ತು ಚಾತುರ್ಯತೆಯಿಂದ ಎಲ್ಲರನ್ನೂ ನಗಿಸುತ್ತ ವಿನೋದಭರಿತವನ್ನಾಗಿಸಿದರು.

## ಲುಧಿಯಾನ

ಮಾರ್ಚ್ 1ರಂದು ಲುಧಿಯಾನಾಗೆ ಆಗಮಿಸಿದ ಗುರುಗಳು ಅಭ್ಯಾಸಿಗಳೊಡನೆ ಮಾತನಾಡಿ ಸತ್ಸಂಗವನ್ನು ನಡೆಸಿಕೊಟ್ಟರು. ಮರುದಿನ, ಆಶ್ರಮ ನಿವೇಶನದಲ್ಲಿ ಸತ್ಸಂಗ ನಡೆಸಿದ ನಂತರ ಗುರುಗಳು ಶಿಲಾನ್ಯಾಸ ಮಾಡಿದರು. ನಂತರದ ಉಪನ್ಯಾಸದಲ್ಲಿ ಅವರು ಪಂಜಾಬ್ ಪ್ರಾಂತ್ಯದ ಬಗ್ಗೆ ತಮ್ಮ ಒಲವನ್ನು ವಿವರಿಸುತ್ತಾ ಪಂಜಾಬಿಯಲ್ಲಿ ಕೆಲವು ಮಾತುಗಳನ್ನೂ ಆಡಿದರು. ಅವರು ಆಶ್ರಮಕ್ಕೆ ಬರದಿರುವವರಿಗೆ ಉಪಯೋಗಿಸುವ ಶಬ್ದ, "ತುಸೀ ಬೇವಕೂಫ್" (ನೀನೊಬ್ಬ ಮೂರ್ಖ) ಮತ್ತು "ನಾಳ್ ಆಜಾ"(ನನ್ನೊಂದಿಗೆ ಬಾ). ಗುರುಗಳ ಉಪನ್ಯಾಸದ ಕೆಲವು ಅಂಶಗಳೆಂದರೆ:

- ಅಭ್ಯಾಸಿಗಳು ಗುರುಗಳು ಪದೇ ಪದೇ ಭೇಟಿ ನೀಡುವುದರ ಹಿಂದಿನ ಉದ್ದೇಶವನ್ನು ಪರಿಶೀಲಿಸಬೇಕು.
- ಇನ್ನೊಂದು ಮಾರ್ಗದಲ್ಲಿ ನಡೆಯುವ ಮುನ್ನ ಮೊದಲ ಮಾರ್ಗವನ್ನು ತ್ಯಜಿಸಬೇಕು. ನಾನು ಒದ್ದೆಯಾಗದೆ ಈಜಲು ಸಾಧ್ಯವಿಲ್ಲ; ನಾನು ನೆಲದ ಮೇಲೆ ನಿಂತು ಹಾರಲು ಸಾಧ್ಯವಿಲ್ಲ. ಅಸ್ತಿತ್ವದ ಮತ್ತೊಂದು ಸ್ಥಿತಿ ಪಡೆಯುವ ಮುನ್ನ ಮೊದಲಿನ ಸ್ಥಿತಿಯನ್ನು ತ್ಯಜಿಸಬೇಕು.
- ಧರ್ಮದಲ್ಲಿ ದೇವರು ಇಲ್ಲ, ಅದೇ ಸತ್ಯ.
- ಪರರಿಗಾಗಿ ಪ್ರಾರ್ಥಿಸುವುದು ಸ್ವಾಗತಾರ್ಹ ಆದರೆ ತನಗಾಗಿ ಪ್ರಾರ್ಥಿಸುವುದು ಯಾಚನೆ.

ಗುರುಗಳು ನಂತರ ಭೋಜನಕ್ಕಾಗಿ ಚಂಡೀಗಢಕ್ಕೆ ತೆರಳಿದರು.

## ಚಂಡೀಗಢ

ಮಾರ್ಚ್ 3ರಂದು ಗುರುಗಳು ಟ್ಯಾಗೋರ್ ಸಭಾಂಗಣದಲ್ಲಿ ಪ್ರಾಂತ್ಯದ ಎಲ್ಲೆಡೆಯಿಂದ ಸೇರಿದ್ದ ಸುಮಾರು 600ಕ್ಕೂ ಮೀರಿದ ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು. ತಮ್ಮ ಪ್ರೀತಿಪಾತ್ರರಾದ ಗುರುಗಳೊಡನೆ ಇದ್ದ ಅಭ್ಯಾಸಿಗಳು ಆನಂದತುಂದಿಲರಾಗಿದ್ದರು. ಸೋ.ಸತ್‌ಬೀರ್ ಮತ್ತು ಸೋ. ಹರ್‌ಭಜನ್ ಸಿಂಗ್‌ರವರ ಲಘು ಭಾಷಣಗಳ ನಂತರ ಸೋ. ಗುರ್‌ಪ್ರೀತ್‌ರವರು ಮನಮುಟ್ಟುವ ಕೆಲವು ಭಜನೆಗಳನ್ನು ಹಾಡಿದರು. ಮರುದಿನ ಅಭ್ಯಾಸಿಗಳಿಗೆ ಆನಂದ ತರುವಂತೆ ಗುರುಗಳು ಹೊರಗೆ ಬಿಸಿಲಿನಲ್ಲಿ ಕುಳಿತು ಸುಮಾರು ಒಂದು ಘಂಟೆಯ ಕಾಲ ಅಭ್ಯಾಸಿಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಸಂಜೆ ಪುನಃ ಸತ್ಸಂಗವನ್ನು ನಡೆಸಿಕೊಟ್ಟರು.

ಗುರುಗಳು ಮಾರ್ಚ್ 5ರಂದು ಉಪಹಾರದ ನಂತರ ದೆಹಲಿಗೆ ಹೊರಟಾಗ ಅಭ್ಯಾಸಿಗಳೆಲ್ಲರೂ ಗುರುಗಳನ್ನು ಇನ್ನೊಮ್ಮೆ ಬರಮಾಡಿಕೊಳ್ಳುವ ಹಾರೈಕೆಯಿಂದ ಅವರನ್ನು ಬೀಳ್ಕೊಡಲು ಸನ್ನದ್ಧರಾಗಿದ್ದರು. ಗುರುಗಳು ದೆಹಲಿ ತಲುಪುವ ಮುನ್ನ ಕಾರ್ನಾಲ್‌ನಲ್ಲಿ ವಿಶ್ರಮಿಸಿ ಸತ್ಸಂಗವನ್ನು ನಡೆಸಿಕೊಟ್ಟರು.





ಸಂಪುಟ 4 ಸಂಚಿಕೆ 3 ಮೇ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ





## ಗುರುಗಳ ಪ್ರವಾಸಕಾಲದಲ್ಲಿ ಆಯ್ದ ನುಡಿಮುತ್ತುಗಳು:

- ಅತೃಪ್ತ ಬಯಕೆಗಳಿಂದ ಕೋಪ ಭುಗಿಲೇಳುತ್ತದೆ; ಇದರಿಂದ ಮನಕ್ಕೆ ಮೋಡ ಕವಿದು ಯೋಚನಾಸಾಮರ್ಥ್ಯವನ್ನು ತಡೆದು ಸ್ವಯಂನಾಶಕ್ಕೆ ಎಡೆಮಾಡಿಕೊಡುತ್ತದೆ.
- ಸಂತೋಷವು ಹೊರ ಪ್ರಪಂಚದಿಂದ ಪ್ರತ್ಯೇಕವಾದ ನಮ್ಮ ಮಾನಸಿಕ ಸ್ಥಿತಿ.
- ನಂಬುಗೆಯು ಮನವನ್ನು ತೆರೆಯುತ್ತದೆ; ಪೂರ್ವಾಗ್ರಹವು ಅದನ್ನು ಮುಚ್ಚುತ್ತದೆ.
- ಪ್ರೇಮವು ಹೃದಯದಿಂದ ಅನಂತದೆಡೆಗೆ ಹೋಗುವ ಏಕಮುಖ ಹಾದಿ.
- ಅನೇಕ ಜನ್ಮಗಳ ನಂತರ ನಮ್ಮ ಆತ್ಮಸಂಗಾತಿಯನ್ನು ಪಡೆಯುವ ಅತ್ಯುಚ್ಛ ಸ್ಥಿತಿಯೇ ನಿಜವಾದ ದಾಂಪತ್ಯ.
- ಪ್ರೀತಿಯಿಂದ ಏನನ್ನೇ ಮಾಡಿದರೂ ಎಲ್ಲಾ ಸಮಸ್ಯೆಗಳ ನಿವಾರಣೆಯಾಗುತ್ತದೆ.
- ಮನಸ್ಸನ್ನು ಹೇಗೆ ತೊಡಗಿಸಬೇಕೆಂದು ಕೇಳಿದಾಗ ಗುರುಗಳೆಂದರು, " ನೀವು ಅದನ್ನು ಶುರುಮಾಡಿದಾಗಲೇ ವ್ಯತ್ಯಾಸ ತಿಳಿಯುವುದು. ಮನೋಬಲ ದೃಢವಾಗಿಲ್ಲದಿದ್ದರೆ ಬಯಕೆಗಳು ಬಲ ಪಡೆಯುತ್ತವೆ. ಶಿಸ್ತು ಬಯಕೆಯನ್ನು ಮತ್ತು ಸಂಕಲ್ಪವನ್ನು ಸಂತುಲಿತಗೊಳಿಸುತ್ತದೆ. ಸಂಕಲ್ಪವು ಹೃದಯದಿಂದ ಬರುವುದು ಬುದ್ಧಿಯಿಂದಲ್ಲ. ಸಂಕಲ್ಪಶಕ್ತಿಗೆ ಯಾವ ಮಾರ್ಗವು ಇಲ್ಲದಿರುವುದರಿಂದ ನಮಗೆ ಎಂದಿಗೂ ಅಪಾಯ. ಶುದ್ಧೀಕರಣವು ಮಾರ್ಗ ತೋರಿಸುತ್ತದೆ."

## ರಾಯ್‌ಪುರ

ಗುರುಗಳನ್ನು ರಾಯ್ಪುರ ವಿಮಾನನಿಲ್ದಾಣದಲ್ಲಿ ಸಂಜೆ 7:40ಕ್ಕೆ ಅಭ್ಯಾಸಿಗಳು ಬರಮಾಡಿಕೊಂಡರು ಮತ್ತು ಗುರುಗಳು ಅಲ್ಲಿಂದ ನವನಿರ್ಮಿತ ಯೋಗಾಶ್ರಮಕ್ಕೆ ಹೊರಟರು. ಆಶ್ರಮ ತಲುಪಿದಾಗ ಗುರುಗಳಿಗೆ ಅತ್ಯಂತ ಶಿಸ್ತು ಮತ್ತು ಪ್ರೇಮಭರಿತ ಸ್ವಾಗತ ಕೋರಲಾಯಿತು. ರಾತ್ರಿ ಹತ್ತು ಘಂಟೆ ಸುಮಾರಿಗೆ ಅವರು ತಮ್ಮ ಕಚೇರಿಯಿಂದ ಹೊರಬಂದು ಅಭ್ಯಾಸಿಗಳೊಡನೆ ಸುಮಾರು ಅರ್ಧ ಘಂಟೆ ಕುಳಿತರು. 8ನೇ ತಾರೀಖು ಗುರುಗಳು ತಾತ್ಕಾಲಿಕ ಧ್ಯಾನಮಂದಿರಕ್ಕೆ ಬಂದು 8:30ರ ಸುಮಾರಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಅವರು ಗಾಲ್ಫ್ ಗಾಡಿಯಲ್ಲಿ ಆಶ್ರಮದಲ್ಲಿ ತಿರುಗಾಡುತ್ತಾ ಅಲ್ಲಿನ ಕಾರ್ಯವಿಧಾನದಿಂದ ಸಂತುಷ್ಟರಾದರು.

ಮಾರ್ಚ್ 9ರ ದಿನವು ಛತ್ತೀಸ್‌ಗಢ ಮತ್ತು ಸುತ್ತಮುತ್ತಲಿನ ಪ್ರದೇಶದ 2000 ಅಭ್ಯಾಸಿಗಳು ಎದುರುನೋಡುತ್ತಿದ್ದ ದಿನವಾಗಿದ್ದಿತು. ಗುರುಗಳು ಉದ್ಘಾಟನಾ ಫಲಕವನ್ನು ಅನಾವರಣ ಮಾಡುತ್ತಿದ್ದಂತೆಯೇ 9600 ಚ.ಅಡಿ  ವಿಸ್ತೀರ್ಣದೊಂದಿಗೆ ಪರಿಪೂರ್ಣ ಮತ್ತು ಅತ್ಯುತ್ತಮ ಗುಣಮಟ್ಟದ ನಿರ್ಮಾಣದ ಸುಂದರ ಧ್ಯಾನಮಂದಿರವನ್ನು ನೋಡಿ ಸಂತೋಷಿಸಿದರು. ಸತ್ಸಂಗದ ನಂತರ ಗುರುಗಳು ಮಾತನಾಡಿದರು:

- ಆಧ್ಯಾತ್ಮದ ಬೀಜ ಬಿತ್ತುವ ಪದ್ಧತಿಯೆಂದರೆ ಸಹಜಮಾರ್ಗ ಒಂದೇ.
- ಗುಣಮಟ್ಟದೊಡನೆ ಅಭ್ಯಾಸಿಗಳ ಸಂಖ್ಯೆಯೂ ಹೆಚ್ಚಾಗಬೇಕು.
- ಧ್ಯಾನಮಂದಿರವು ಧ್ಯಾನಕ್ಕಾಗಿ ಮಾತ್ರ ಉಪಯೋಗಿಸಬೇಕು, ಜನ ಆಶ್ರಮದ ಆವರಣದಲ್ಲಿ ಧಾರ್ಮಿಕ ವಿಧಿಗಳನ್ನು ಆಚರಿಸಬಾರದು.

ಗುರುಗಳು ಸಿಆರ್‌ಪಿಎಫ್‌ನ ಸೈನಿಕರನ್ನು ಕಂಡು ಸಂತಸಿತರಾದರು (ಸುಮಾರು 100 ಜನ ಮಿಷನ್ನನ್ನು ಸೇರಿದ್ದಾರೆ) ಮತ್ತು ಭವಿಷ್ಯದಲ್ಲಿ ಅವರ ಬೆಟಾಲಿಯನ್‌ಗಳು ಸೇರುವಂತೆ ಹಾರೈಸಿದರು.







ಸಂಜೆ ಸತ್ಸಂಗದ ನಂತರ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದರು. ಸಂಜೆಯ ಸತ್ಸಂಗ ನಡೆಯುವಾಗ ಗುರುಗಳು ಕುಟೀರದ ಹೊರಗೆ ಕುಳಿತು ಸುಮಾರು 80 ಸ್ವಯಂಸೇವಕರಿಗೆ ಬೆಳ್ಳಿಯ ನಾಣ್ಯಗಳನ್ನು ನೀಡುವ ಮೂಲಕ ಅವರ ಕಾರ್ಯ ಪ್ರಶಂಸಿಸಿದರು. ಅವರ ಆರೋಗ್ಯ ನಿರ್ಬಂಧಗಳ ಹೊರತಾಗಿಯೂ ಅವರು ಉಲ್ಲಸಿತರಾಗಿ ಕಂಡರು ಮತ್ತು ಅಭ್ಯಾಸಿಗಳೊಡನೆ ಸಮಯ ಕಳೆದರು.

ಮಾರ್ಚ್ 10ರಂದು ಗುರುಗಳು ಬೆಳಿಗ್ಗೆ 7:05ಕ್ಕೆ ಸತ್ಸಂಗವನ್ನು ನಡೆಸಿಕೊಟ್ಟರು (ಎಂದಿನ ಪ್ರಕಾರ 7:30ಕ್ಕೆ ನಡೆಯಬೇಕಿದ್ದುದು). ತದನಂತರ, ಅವರು ಅಭ್ಯಾಸಿ ಸೋದರರೊಬ್ಬರ ಮನೆಗೆ 10ಘಂಟೆಗೆ ತೆರಳಿದರು ಹಾಗೂ ಅಲ್ಲಿಂದ ಮಧ್ಯಾಹ್ನ ಹೈದರಾಬಾದ್‌ಗೆ ಹೊರಡಲು ವಿಮಾನನಿಲ್ದಾಣಕ್ಕೆ ತೆರಳಿದರು.

## ಹೈದರಾಬಾದ್

ಮಾರ್ಚ್ 10ರಂದು ಮಧ್ಯಾಹ್ನ 1:45ಕ್ಕೆ ಗುರುಗಳು ಹೈದರಾಬಾದ್‌ಗೆ ಆಗಮಿಸಿದಾಗ ವಿಮಾನ ನಿಲ್ದಾಣದಲ್ಲಿ ಅಭ್ಯಾಸಿಗಳು ಹಾರ್ದಿಕ ಸ್ವಾಗತ ಕೋರಿದರು. ವಲಯಾಶ್ರಮಕ್ಕೆ ಹೋಗುವ ಹಾದಿಯಲ್ಲಿ ರಾಜಕೀಯ ಮೆರವಣಿಗೆ ನಡೆಯಲಿದೆ ಎಂದು ತಿಳಿದಾಗ ಅವರು ನಿಲ್ದಾಣದ ಸಮೀಪ ಅಭ್ಯಾಸಿಯೊಬ್ಬರ ಮನೆಗೆ ತೆರಳಿದರು. ಲಘು ವಿಶ್ರಾಂತಿಯ ನಂತರ ಅವರು ಕಾನ್ಹಾ ಶಾಂತಿವನಮ್ ಯೋಜನೆಯ ವಿವರಗಳನ್ನು ಪರಿಶೀಲಿಸಿದರು. ನಂತರ ಉಪಸ್ಥಿತರಿದ್ದ ಅಭ್ಯಾಸಿಗಳಿಗೆ ಬೈಠಕನ್ನು ನೀಡಿದರು.

ಮರುದಿನವೂ ಸಹ ಗುರುಗಳು ಯೋಜನೆಯ ನೋಂದಣಿ ವಿವರಗಳನ್ನು ಪರಿಶೀಲಿಸುವುದರಲ್ಲಿ ವ್ಯಸ್ತರಾಗಿದ್ದರು ಹಾಗೂ ಕಾನ್ಹಾ ಯೋಜನೆಯ ನೋಂದಣಿ ಕಾರ್ಯವು ಮೊದಲ ಹಂತ ದಾಟಿದೆ ಎಂದು ತಿಳಿದು ಸಂತಸಗೊಂಡರು.



ಮಾರ್ಚ್ 12ರಂದು ಗುರುಗಳು ವಲಯಾಶ್ರಮಕ್ಕೆ ಆಗಮಿಸಿದಾಗ ಅವರ ಕಚೇರಿಯ ಹಾದಿಯುದ್ದಕ್ಕೂ ನಿಂತ ಸಾವಿರಾರು ಅಭ್ಯಾಸಿಗಳು ಸ್ವಾಗತಿಸಿದರು. ಗುರುಗಳು "ಅದ್ಭುತ ಶಿಸ್ತು, ನೋಡಲು ಬಲು ಖುಶಿ" ಎಂದು ಉದ್ಗರಿಸಿದರು. ಕುಟೀರದ ಪ್ರವೇಶದ್ವಾರದಲ್ಲಿ ನವನಿರ್ಮಿತ ಏರುಹಾದಿಯಲ್ಲಿ ನಡೆಯುತ್ತಾ ಅವರು ಕುಟೀರವನ್ನು ಪ್ರವೇಶಿಸಿದರು. ನಂತರ ಅವರು ತಮ್ಮ ಕಚೇರಿ ಮತ್ತು ಸಭಾಗೃಹವನ್ನು ನೋಡಿದರು. ಗುರುಗಳು ಸುಮಾರು 5000 ಅಭ್ಯಾಸಿಗಳಿಗಾಗಿ ಮುಂಜಾನೆ ಮತ್ತು ಸಂಜೆ ಸತ್ಸಂಗವನ್ನು ನಡೆಸಿಕೊಟ್ಟರು. ಅಭ್ಯಾಸಿಯೊಬ್ಬರು ಅವರ ಗಡ್ಡವು ಸುಂದರವಾಗಿದೆ ಎಂದಾಗ ಅವರು, ಆ ಗಡ್ಡದ ಹಿಂದಿನ ಮುಖವು ಇನ್ನೂ ಸುಂದರವಾಗಿದೆ ಎಂದು ತಮಾಷೆ ಮಾಡಿದರು. ಗುರುಗಳು ಅತ್ಯುತ್ತಮ ಆರೋಗ್ಯಶಾಲಿಗಳಾಗಿ ಮತ್ತು ಉತ್ಸಾಹಿಯಾಗಿ ಕಾಣುತ್ತಿದ್ದರು.

ಅವರ ಕುಟೀರದ ದ್ವಾರಗಳನ್ನು ಸದಾ ತೆರೆದಿಡಲಾಗುತ್ತಿತ್ತು. ತಮ್ಮ ಪ್ರಿಯ ಗುರುಗಳನ್ನು ಕಾಣಲು ದೂರದಿಂದ ಬಂದ ಎಷ್ಟೋ ಹೃದಯಗಳಿಗೆ ಇದು ತಂಪನ್ನೆರೆಯಿತು. ಗುರುಗಳು ಮಲಗುವ ಕೋಣೆಯಿಂದ ಹೊರಬಂದು ಹಜಾರದಲ್ಲಿ ಕುಳಿತಾಗ ಅವರನ್ನು ನೋಡುವ ಭಾಗ್ಯ ಎಷ್ಟೋ ಅಭ್ಯಾಸಿಗಳಿಗೆ ದೊರೆಯಿತು.

ಮಾರ್ಚ್ 13ರಂದು ಗುರುಗಳು ಧ್ಯಾನಮಂದಿರದೆಡೆ ಹೋಗುತ್ತಿರುವಾಗ ಪಾಕಶಾಲೆಯ ಕಾರ್ಯಕರ್ತರು ಶುಭ ಕೋರಿದರು. ಗುರುಗಳು ಅವರೊಡನೆ ತುಸು ಕಾಲ ಮಾತನಾಡಿ ಅವರಿಗೆ ಆಹಾರದಲ್ಲಿ ಹಾಕುವ ಅತಿಮುಖ್ಯ ಪದಾರ್ಥವೆಂದರೆ ಪ್ರೇಮ ಎಂದು ಹೇಳಿದರು. ಅವರು 6000ಕ್ಕೂ ಮಿಗಿಲಾಗಿ ಅಭ್ಯಾಸಿಗಳಿಂದ ಕಿಕ್ಕಿರಿದು ತುಂಬಿದ್ದ ಧ್ಯಾನಮಂದಿರದಲ್ಲಿ ಸತ್ಸಂಗ ನಡೆಸಿಕೊಟ್ಟರು. ಮಧ್ಯಾಹ್ನ ಮಕ್ಕಳು ಗುರುಗಳೊಂದಿಗೆ ವಿಶೇಷ 1 ಘಂಟೆ ಕಾಲ ಕಳೆದರು. ಸತ್ಸಂಗದ ನಂತರ ಪ್ರದರ್ಶಿಸಿದ ನೃತ್ಯರೂಪಕವು ಆಕಾಂಕ್ಷಿಯ ದ್ವಂದ್ವ ಮತ್ತು ಸಹಜಮಾರ್ಗ ತತ್ವಗಳ ಮಾರ್ಗದರ್ಶನವನ್ನು ಬಿಂಬಿಸಿತು. ಗುರುಗಳು ತಮ್ಮ ಕೋಣೆಯ ಸಿಸಿಟಿವಿಯಲ್ಲಿ ಅದನ್ನು ನೋಡಿ ಆನಂದಿಸಿದರು.





ಸಂಪುಟ 4 ಸಂಚಿಕೆ 3 ಮೇ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ



ಮಾರ್ಚ್ 14ರಂದು ಗುರುಗಳು ಬೆಳಿಗ್ಗೆ 7.30ಕ್ಕೆ ಸತ್ಸಂಗ ನಡೆಸಿದರು. ಸತ್ಸಂಗದ ನಂತರ ಅವರು ನಮ್ಮ ಚಾರಿತ್ರ್ಯ ಬಲಗೊಳಿಸುವ ಅಗತ್ಯ ಮತ್ತು ಹೃದಯ ಜ್ಯೋತಿಯನ್ನು ಬೆಳಗಿಸುವಂತೆ ಹೇಳಿದರು. ಅವರು ನಂತರ 1:45ಕ್ಕೆ ವಿಮಾನನಿಲ್ದಾಣಕ್ಕೆ ತೆರಳಿದರು.

## ಚೆನ್ನೈ : ಮರಳಿ ಮನೆಗೆ ಬಂದ ಗುರುಗಳು

ಸುಮಾರು ಒಂದೂವರೆ ತಿಂಗಳಿನ ಅನುಪಸ್ಥಿಯ ನಂತರ ಗುರುಗಳು ಮಾರ್ಚ್ 14ರಂದು ಮರಳಿದರು. ಬಹಳ ದಿನಗಳ ನಂತರ ಅವರನ್ನು ನೋಡುತ್ತಿರಲು ವಿಮಾನನಿಲ್ದಾಣದಲ್ಲಿ ಸೇರಿದ್ದ ಅಭ್ಯಾಸಿಗಳು ಆನಂದಿತರಾದರು. ಅವರು ನೇರವಾಗಿ 'ಗಾಯತ್ರಿ'ಗೆ ಹೋಗಿ ಮುಂದಿನ ಒಂದು ವಾರ ವಿರಮಿಸಿದರು ಮತ್ತು ಸಂಜೆಗಳಲ್ಲಿ ಅಭ್ಯಾಸಿಗಳನ್ನು ಭೇಟಿ ಮಾಡುತ್ತಿದ್ದರು. ಅವರು ಕೆಲವೊಮ್ಮೆ ಸತ್ಸಂಗ ನಡೆಸಿದರೆ ಕೆಲವೊಮ್ಮೆ ಮಾತನಾಡುತ್ತಿದ್ದರು. ಆಗಿನಿಂದಲೂ ಅವರು ತಮ್ಮ ಸಮಯವನ್ನು 'ಗಾಯತ್ರಿ' ಮತ್ತು ಆಶ್ರಮಗಳ ನಡುವೆ ಹಂಚುತ್ತಿದ್ದಾರೆ. ಅವರು ವಿಶ್ರಮಿಸುತ್ತಿದ್ದಾರೆ ಮತ್ತು ಕೆಲವೊಮ್ಮೆ ಅಭ್ಯಾಸಿಗಳೊಡನೆ ಸಮುದ್ರ ತೀರದಲ್ಲಿ ವಿರಮಿಸುತ್ತಾರೆ. ಅವರ ಎಂದಿನ ಕೆಲಸಗಳಾದ ಮಿಷನ್ ಮೇಲ್ವಿಚಾರಣೆ, ಈ-ಮೇಲ್ ವ್ಯವಹಾರ ಮತ್ತು ಹೊಸ ಪ್ರಶಿಕ್ಷಕರ ತಯಾರಿ ನಿರ್ಧರಿತ ಗತಿಯಲ್ಲಿ ಸಾಗುತ್ತಿವೆ.

## ಮಣಪ್ಪಾಕ್ಕಂ ಆಶ್ರಮದಲ್ಲಿ ಅಭ್ಯಾಸಿಗಳ ಪ್ರವಾಹ

ಮುಂಬೈ ಕೇಂದ್ರದಿಂದ ಅನಿರೀಕ್ಷಿತವಾಗಿ 500 ಅಭ್ಯಾಸಿಗಳು ಮಣಪ್ಪಾಕ್ಕಂ ಆಶ್ರಮಕ್ಕೆ ಭೇಟಿ ನೀಡಿದರು ಮತ್ತು ಗುರುಗಳು ಅವರಿಗಾಗಿ ಸತ್ಸಂಗಗಳನ್ನೂ ನಡೆಸಿಕೊಟ್ಟರು. ಪ್ರತೀ ದಿನ ಆಹ್ವಾನಿತ ಪ್ರಶಿಕ್ಷಕರು ಮತ್ತು ಕಾರ್ಯನಿರ್ವಾಹಕರೊಡನೆ ಚರ್ಚೆ ನಡೆಸುತ್ತಾ ಅದಕ್ಕೊಂದು ಸಭೆಯ ರೂಪ ನೀಡಿದರು. ಅಲ್ಲದೆ ಒಂದು ಸಂಜೆ ಅವರು ಗುರುಗಳಿಗಾಗಿ ವಿಶೇಷ ಕೇಕನ್ನು ಕತ್ತರಿಸಿ ಸಣ್ಣ ಕಾರ್ಯಕ್ರಮ ನಡೆಸಿದ್ದನ್ನು ಕಂಡು ಗುರುಗಳು ಸಂತೋಷಗೊಂಡರು. ಸತತವಾಗಿ ಅಭ್ಯಾಸಿಗಳು ಎಲ್ಲೆಡೆಯಿಂದ ತಂಡೋಪತಂಡವಾಗಿ ಆಶ್ರಮಕ್ಕೆ ಭೇಟಿ ನೀಡುತ್ತಿದ್ದಾರೆ. ಕೇವಲ ಹಿಂದಿನ ಒಂದು ತಿಂಗಳಿನಲ್ಲಿ ಹೊರಗಿನ ಕೇಂದ್ರಗಳಿಂದ ಸುಮಾರು 3,300 ಅಭ್ಯಾಸಿಗಳು ಗುರುಗಳನ್ನು ಕಾಣಲು ಬಂದಿದ್ದಾರೆ. ಏಪ್ರಿಲ್ 10ರಂದು ಗುರುಗಳು ಎಂಟು ವಿವಾಹಗಳನ್ನು ಸಂಪನ್ನಗೊಳಿಸಿದರು. ಅವರ ಕಾಲಿನ ನೋವಿನ ಹೊರತಾಗಿಯೂ ಸಹ ಅವರು ಎಲ್ಲಾ ವಿವಾಹಗಳನ್ನು ನಿಂತೇ ನಡೆಸಿಕೊಟ್ಟರು.



## ಗುರುಗಳು ತಮ್ಮ ಫಸಲಿನ ಫಲ ಪಡೆದರು

ಗುರುಗಳು LMOIS ಶಾಲೆಯ ವಿದ್ಯಾರ್ಥಿಗಳಿಗೆ ಸಮಯ ನೀಡುತ್ತಿದ್ದಾರೆ ಮತ್ತು ಅವರೆಡೆ ವಿಶೇಷ ಗಮನ ನೀಡುತ್ತಿದ್ದಾರೆ. ಅವರಲ್ಲಿ ಸುಮಾರು ಅರವತ್ತು ಮಕ್ಕಳು ಧ್ಯಾನ ಪ್ರಾರಂಭಿಸಿದ್ದಾರೆ; ಕೆಲವರು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವರಾದರೂ ಗುರುಗಳ ವಿಶೇಷ ಅನುಮತಿಯಿಂದ ಪ್ರಾರಂಭಿಸಿದ್ದಾರೆ. ಆಶ್ರಮದ ಸತ್ಸಂಗದಲ್ಲಿ ಅವರು ಮುಂದೆ ಕುಳಿತಿರುವುದನ್ನು ಕಾಣಬಹುದು. ಒಂದು ಸಂಜೆ ಗುರುಗಳು ಅವರಿಗಾಗಿ ಸತ್ಸಂಗ ನಡೆಸಿ ಅವರೊಡನೆ ರಾತ್ರಿಯ ಭೋಜನವನ್ನು ಮಾಡಿದರು. ಈ ಮುನ್ನಡೆಯ ಕುರಿತು ತೃಪ್ತಿಯಿಂದ ಅವರು ಹೇಳಿದರು, "ನಾನು ತನ್ನ ಫಸಲಿನ ಕೊಯ್ಲು ಮಾಡುವ ರೈತನ ಜಾಗದಲ್ಲಿದ್ದೇನೆ. ನಾನು ಈ ಮಕ್ಕಳ ಮೇಲೆ ಕಾರ್ಯತತ್ಪರನಾಗಿದ್ದೇನೆ. ಅದೇ ನನ್ನ ಪ್ರಾಶಸ್ತ್ಯ, ನನಗೆ ಶಿಕ್ಷಣ ಮತ್ತು ಇನ್ನಿತರ ವಿಷಯಗಳ ಬಗ್ಗೆ ಕಾಳಜಿಯಿಲ್ಲ." ಶಿಕ್ಷಕರ ಪಾತ್ರ ಕುರಿತು ಅವರು ಹೇಳಿದರು, "ಶಿಕ್ಷಕರೆಂದರೆ, ತಾವು ಹೇಳಿದ್ದನ್ನು ಮಕ್ಕಳೆಷ್ಟು ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ನಿಶ್ಚಿತಗೊಳಿಸಬೇಕೇ ವಿನಃ ತಾನೇನು ಹೇಳುತ್ತಿದ್ದೇನೆ ಎಂಬುದರ ಕಡೆ ಗಮನ ನೀಡುವುದಲ್ಲ. ಒಬ್ಬ ಒಳ್ಳೆಯ ಶಿಕ್ಷಕ ಎಂದಿಗೂ ತನ್ನ ವಿದ್ಯಾರ್ಥಿಗಳಲ್ಲಿ ಅದ್ಭುತ ಮತ್ತು ಮಂತ್ರಮುಗ್ಧ ಭಾವವನ್ನು ಉಂಟು ಮಾಡುತ್ತಾನೆ."

## ದಕ್ಷಿಣ ವಲಯಗಳಿಗಾಗಿ ISTP

ಭಾರತೀಯ ಪಾಂಡಿತ್ಯ ತರಬೇತಿ ಕಾರ್ಯಕ್ರಮವನ್ನು ಗುರುಗಳು ಏಪ್ರಿಲ್ 16ರಂದು ಉದ್ಘಾಟಿಸಿ ದಕ್ಷಿಣಭಾರತ ಪ್ರಾಂತ್ಯದಿಂದ ಬಂದ 59 ಭಾಗಿಗಳನ್ನು ಕುರಿತು ಮಾತನಾಡಿದರು. ಗುರುಗಳು ಜ್ಞಾನದ ಪರಿಮಿತಿಗಳು, ಈ ಜೀವನದ ನಂತರದ ಕುರಿತು ನಮ್ಮ ಅಜ್ಞಾನ ಮತ್ತು ಹೇಗೆ, ಸಹಜಮಾರ್ಗದಲ್ಲಿ ಎಲ್ಲವನ್ನೂ ಪ್ರಾಣಾಹುತಿ ಮೂಲಕ ನೀಡಲಾಗುತ್ತದೆ ಎಂದು ತಿಳಿಸಿದರು. ಪ್ರಾಪಂಚಿಕ ಜೀವನವು ಕಷ್ಟಗಳು ಅನಿವಾರ್ಯ ಹಾಗೂ ಹಿಂದಿನ ಸಂತರು ಕೂಡ ಪರೀಕ್ಷೆ ಮತ್ತು ಕ್ಲೇಶಗಳಿಗೆ ಹೊರತಾಗಿಲ್ಲ ಎಂದು ಅವರು ಹೇಳಿದರು.





# ಪ್ರಕಟಣೆ

ಹೊಸ ನೇಮಕಾತಿಗಳು

ವಿಜಯ್ ಕುಮಾರ್ ಅಗರ್‌ವಾಲ್
ಕೇಂದ್ರ ಪ್ರಮುಖರು, ಭಟಿಂಡಾ ಕೇಂದ್ರ

ಮೇಜರ್ ಜನರಲ್ ಆನಂದ್ ನಾರಾಯಣ್ ಮುದ್ರೆ
ಕೇಂದ್ರ ಪ್ರಮುಖರು, ಜಬಲ್ಪುರ ಕೇಂದ್ರ

ಸಂದೀಪ್ ಪ್ರಧಾನ್
ಕೇಂದ್ರ ಪ್ರಮುಖರು, ಗ್ವಾಲಿಯರ್ ಕೇಂದ್ರ

ಸತ್ಖೋಲ್‌ಗಾಗಿ ವೈದ್ಯ ಸ್ವಯಂಸೇವಕರು
ಸತ್ಖೋಲ್‌ನ ವೈದ್ಯ ಕೇಂದ್ರಕ್ಕಾಗಿ ಜುಲೈ 2011ರಿಂದ ಡಿಸೆಂಬರ್ 2011 ಕಾಲಾವಧಿಯಲ್ಲಿ ಅಭ್ಯಾಸಿ ವೈದ್ಯ ಸ್ವಯಂಸೇವಕರ ನೋಂದಣಿಯು ಜಾರಿಯಲ್ಲಿದೆ. ದಯವಿಟ್ಟು ನಿಮ್ಮ ಸಮ್ಮತಿಯನ್ನು ಆದಷ್ಟೂ ಬೇಗನೇ ಕಳುಹಿಸಿ. ಸ್ವಯಂಸೇವೆಯ ಕಾಲಾವಧಿಯು 15 ದಿನಗಳು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಡಾ. ಸಿ.ಕೆ.ಪ್ರಸನ್ನಕುಮಾರ್
ನಿವಾಸಿ ವೈದ್ಯರು
ವೈದ್ಯ ಕೇಂದ್ರ
ಸತ್ಖೋಲ್

## ಗುರುಗಳ 85ನೇ ಹುಟ್ಟುಹಬ್ಬದ ಆಚರಣೆಗೆ ನೋಂದಣಿ

ತಿರುಪ್ಪೂರ್, ಭಾರತದಲ್ಲಿ ನಡೆಯಲಿರುವ ಗುರುಗಳ 85ನೇ ಹುಟ್ಟುಹಬ್ಬದ ಆಚರಣೆಗಾಗಿ ನೋಂದಣಿಯು ತೆರೆದಿದೆ. ಭಾರತದ ಅಭ್ಯಾಸಿಗಳು ತಮ್ಮ ಕೇಂದ್ರದಲ್ಲಿ ನೋಂದಣಿ ಮಾಡಬೇಕು. ಅರ್ಜಿಯನ್ನು ಆಶ್ರಮದ ವೆಬ್‌ಸೈಟಿನಿಂದ ತೆಗೆದುಕೊಳ್ಳಬಹುದು.


ಹೊರದೇಶದ ಅಭ್ಯಾಸಿಗಳು ಇಂಟರ್ನೆಟ್ ಮುಖಾಂತರ ನೋದಣಿ ಮಾಡಬಹುದು, ವಿವರಗಳು ವೆಬ್‌ಸೈಟಿನಲ್ಲಿವೆ.

ಅಭ್ಯಾಸಿಗಳು ಆರೋಗ್ಯ ಮತ್ತು ಸುರಕ್ಷಿತ ಪ್ರಯಾಣದ ಸಲಹಾಸೂಚಿಯನ್ನು ನೋಂದಣಿಗೂ ಮೊದಲು ಓದಿಕೊಳ್ಳಬೇಕಾಗಿ ವಿನಂತಿ. ವಿವರಕ್ಕಾಗಿ ನೋಡಿ: http://www.sahajmarg.org/july-24-celebrations/2011


## ದಿವ್ಯಲೋಕದಿಂದ ಪಿಸುಮಾತುಗಳು ಮೂರನೇ ದೇವವಾಣಿ

ಗುರುಗಳ ಅನುಮತಿಯೊಂದಿಗೆ ಮಾರ್ಚ್ 28ರಿಂದ ಸರಣಿಯ ಹೊಸ ಪ್ರಕಟನೆಯಾದ 'ದಿವ್ಯಲೋಕದಿಂದ ಪಿಸುಮಾತುಗಳು ಮೂರನೇ ದೇವವಾಣಿ'ಯ ಸಂದೇಶಗಳು 'ಎ ವಿಸ್ಪರ್ ಎ ಡೇ' ಚಂದಾದಾರರಿಗೆ ತಲುಪುತ್ತವೆ. ಈ ದೈನಿಕ ಈ ಮೇಲ್ ಸೇವೆಗೆ ನೀವಿನ್ನೂ ಚಂದಾದಾರರಾಗಿಲ್ಲದಿದ್ದಲ್ಲಿ ನಮ್ಮ ವೆಬ್‌ಸೈಟಿಗೆ ಭೇಟಿನೀಡಿ ಚಂದಾದಾರರಾಗಬಹುದು : http://www.sahajmarg.org/literature/newsletters


# ಹೊಸ ಪ್ರಕಟನೆಗಳು




ಹೃದಯವಾಣಿ 2007
ತೆಲುಗು





ಹಾರ್ಟ್‌ಸ್ಪೀಕ್ 2010
ಆಂಗ್ಲ





ನನ್ನ ಗುರುದೇವ
ತೆಲುಗು, ನೇಪಾಳಿ ಮತ್ತು ಕನ್ನಡ




ವಾಯ್ಸ್ ರಿಯಲ್ ಭಾಗ 2
ಮಲಯಾಳಂ




ಸತ್ಯೋದಯ
ಪಂಜಾಬಿ




ಕಾನ್‌ಸ್ಟಂಟ್ ರಿಮೆಂಬ್ರನ್ಸ್
ಏಪ್ರಿಲ್ 2011




ಸ್ಪಾರ್ಕ್ ಕಲೆಕ್ಟರ್ ಭಾಗ 2
ಆಂಗ್ಲ





ಕ್ಯಾರೆಕ್ಟರ್ ಫಾರ್ಮೇಶನ್ ಎಂಪಿ3
ಆಂಗ್ಲ

ಸಂಪುಟ 4 ಸಂಚಿಕೆ 3 ಮೇ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

# ಗತಕಾಲಕ್ಕೊಂದು ಇಣುಕು ನೋಟ

ಬಾಬೂಜಿಯವರು ಏಪ್ರಿಲ್6ರಿಂದ ಏಪ್ರಿಲ್ 22, 1977 ಮಲೇಷಿಯಾ ಮತ್ತು ಸಿಂಗಪೂರಿನ ಪ್ರವಾಸದಲ್ಲಿದ್ದಾಗ ಗುರುಗಳು ಅವರೊಂದಿಗಿದ್ದರು. ಈ ಪ್ರವಾಸವು ಏಪ್ರಿಲ್ 30ರಂದು ಮಧುರೈನಲ್ಲಿ ನಡೆದ ಅವರ ಹುಟ್ಟುಹಬ್ಬದ ವೈಭವ ಆಚರಣೆಯ ಮುಂದುವರಿಕೆಯಾಗಿತ್ತು. ಕೆಳಗಿನ ಭಾಗವನ್ನು ಗುರುಗಳ ದಿನಚರಿಯಿಂದ (ಸದ್ಗುರುವಿನ ಅಡಿಗಳ ಜಾಡಿನಲ್ಲಿ) ತೆಗೆದುಕೊಳ್ಳಲಾಗಿದೆ.



## ಏಪ್ರಿಲ್ 30, 1977 – ಶನಿವಾರ

ನಾನು ಸುಮಾರು ಒಂದೂವರೆ ಕಿ.ಮೀ ದೂರದ 'ಪೆರಿಯಾರ್ ಮಲಿಗೈ'ಗೆ ಎಲ್ಲಾ ವ್ಯವಸ್ಥೆಗಳು ಪೂರ್ಣಗೊಂಡಿವೆಯೇ ಎಂದು ನೋಡಿಬರಲು ವಾಲಂಜೀ ಭವನದಿಂದ ಹೊರಟೆ. ಇಂದು ಗುರುಗಳ ಎಪ್ಪತ್ತೈದನೇ ಹುಟ್ಟುಹಬ್ಬ; ಈ ವರ್ಷ ಅಖಿಲ ಭಾರತ ಮಟ್ಟದ ಆಚರಣೆ ನಡೆಯಲು ಅನುಮತಿ ದೊರಕಿರುವುದರಿಂದ ಮಧುರೈ ಕೇಂದ್ರವು ಅನುಗ್ರಹಕ್ಕೆ ಪಾತ್ರವಾಗಿದೆ.

ಬೆಳಿಗ್ಗೆ 9.30 – ಗುರುಗಳು ಕೆಲ ನಿಮಿಷ ಮುಂಚಿತವಾಗಿಯೇ ಬಂದರು ಹಾಗೂ ಅಲ್ಲಿ ಬೆಳಿಗ್ಗೆ 8ಘಂಟೆಯಿಂದಲೇ ಅವರಿಗಾಗಿ ತವಕದಿಂದ ಕಾಯುತ್ತಿದ್ದ ಒಂದು ಸಾವಿರಕ್ಕೂ ಮಿಗಿಲಾದ ಅಭ್ಯಾಸಿಗಳಿಂದ ಪ್ರೇಮಪೂರಿತ ಸ್ವಾಗತವನ್ನು ಪಡೆದರು. ಗುರುಗಳು ಇಪ್ಪತ್ತು ನಿಮಿಷಗಳ ಕಾಲ ಸಮೂಹ ಸತ್ಸಂಗವನ್ನು ನಡೆಸಿದರು. ಇಷ್ಟು ಮುಂಜಾನೆಯೂ ಕೂಡ ಬಹಳ ಶೆಖೆಯಿದ್ದಿತು. ಗುರುಗಳು ಕುಳಿತಿದ್ದ ಎತ್ತರದ ವೇದಿಕೆಯ ಎರಡೂ ಕಡೆಗೆ ಟೇಬಲ್ ಫ್ಯಾನ್‌ಗಳು ತಿರುಗುತ್ತಿದ್ದವು. ಆದರೂ ಅವರ ಕಸಿವಿಸಿಯನ್ನು ನಾನು ಕಂಡೆ. ಪ್ರಾಣಾಹುತಿಯು ಸೌಮ್ಯವಾಗಿದ್ದು, ಮುದನೀಡಿತು.

ಸತ್ಸಂಗದ ನಂತರ ಗುರುಗಳು ಕೆಲ ನಿಮಿಷಗಳ ಕಾಲ ವಿಶ್ರಾಂತಿ ತೆಗೆದುಕೊಂಡು ಪ್ರತ್ಯೇಕ ಸ್ಥಳದಲ್ಲಿ ಪ್ರಸಾದವನ್ನು ಹಂಚಿದ ನಂತರ ವೇದಿಕೆಗೆ ಮರಳಿದರು. ... ನಂತರ ಕೆಲವು ಉಪನ್ಯಾಸಗಳು ನಡೆದವು. ಗುರುಗಳು ವಾಲಂಜೀ ಭವನಕ್ಕೆ ಮರಳುವ ಮುನ್ನ 11.30ರ ತನಕ ವಿಶ್ರಮಿಸಿದರು.

ಗುರುಗಳು ಧ್ಯಾನಮಂದಿರಕ್ಕೆ ಸಂಜೆ 6ಘಂಟೆಗೆ ಬಂದು ಸತ್ಸಂಗವನ್ನು ನಡೆಸಿಕೊಟ್ಟರು. ಅವರು ನನಗೆ ಹೇಳಿದರು, "ಈ ದಿನ ಬೆಳಿಗ್ಗೆ ಅರ್ಧ ಕೆಲಸವನ್ನು ಮುಗಿಸಿದ್ದೆ. ಈಗ ಉಳಿದದ್ದನ್ನು ಮುಗಿಸುವೆ."

...ಪುಸ್ತಕಗಳ ಮಾರಾಟವು ರೂ.3000 ಯಷ್ಟಾಯಿತು! ನಾವು ರಾತ್ರಿ 9ಘಂಟೆಗೆ ಮನೆಗೆ ಬಂದೆವು. ಅನೇಕ ಅಭ್ಯಾಸಿಗಳು ಗುರುಗಳೊಡನೆ ಕಾಲ ಕಳೆಯಲು ಬಂದಿದ್ದರು. ಎಲ್ಲರೂ ವ್ಯವಸ್ಥೆ, ಗುರುಗಳ ಬೈಠಕುಗಳು ಮುಂತಾದವುಗಳನ್ನು ಹೊಗಳುವಾಗ ಗುರುಗಳು ಹೇಳಿದರು, "ಇದೆಲ್ಲ ಲಾಲಾಜಿ ಸಾಹೇಬರ ಕೊಡುಗೆ. ಬಂದವರಾರೂ ಬರಿಗೈಯಲ್ಲಿ ಮರಳಿ ಹೋಗಿಲ್ಲ."

## ಸಹೋದರಿಯರ ಅಭ್ಯಾಸ ಸಮೂಹ, ಇಂದೋರ್, ಮ.ಪ್ರ.

ಅಭ್ಯಾಸಿಗಳಾಗಿ ಸೋದರ ಸೋದರಿಯಲ್ಲಿ ಯಾವುದೇ ಭೇದವಿಲ್ಲದಿದ್ದರೂ, ಜೀವನದಲ್ಲಿ ಇಬ್ಬರೂ ಬೇರೆ ಪಾತ್ರ ವಹಿಸಬೇಕಾಗುತ್ತದೆ, ದೈನಂದಿನ ಜೀವನದಲ್ಲಿ ಅವರಿಗೆ ವಿಭಿನ್ನ ಸಂದರ್ಭಗಳು ಎದುರಾಗುತ್ತವೆ ಹಾಗೂ ಆಗ ಆಧ್ಯಾತ್ಮಿಕ ತತ್ವಗಳನ್ನು ಅಳವಡಿಸಬೇಕಾಗುತ್ತದೆ.

ಈ ವಿಷಯವನ್ನು ಗುರುತಿಸಿ ಕೆಲವು ಅಭ್ಯಾಸಿ ಸೋದರಿಯರು ಪ್ರತೀ ಮೂರನೇ ಶುಕ್ರವಾರ ಸತ್ಸಂಗಕ್ಕೆ ಸೇರಿ ಅವರ ಸಾಧನೆಯ ವಿವಿಧ ತೊಡಕುಗಳನ್ನು ಚರ್ಚಿಸುತ್ತಾರೆ.

ಮೊದಲ ಸಭೆಯು ಮಾರ್ಚ್ 18ರಂದು ಸೋ.ಕಲಾರವರ ಮನೆಯಲ್ಲಿ ಜರುಗಿತು. ಸುಮಾರು ಇಪ್ಪತ್ತು ಸೋದರಿಯರು ಸತ್ಸಂಗಕ್ಕೆ ಹಾಜರಿದ್ದು ನಂತರ 'ಗುರು ಆಂಡ್ ಗೋಲ್' ಪುಸ್ತಕ ಪಠಣ ನಡೆಯಿತು. ಅವರು ಚಾರಿತ್ರ್ಯ ನಿರ್ಮಾಣದ ಕುರಿತೂ ಚರ್ಚಿಸಿದರು. ನಾವು ಜೀವನಪರ್ಯಂತ ಸುಖದೆಡೆ, ನೋವಿನಿಂದ ದೂರ ಓಡುತ್ತಿರುತ್ತೇವೆ. ಈಗ ಗುರುಗಳು ನಮಗೆ ಸೇವಾ ಮನೋಭಾವದಿಂದ ಕಾಲಕ್ಕೆ ತಕ್ಕಂತೆ ನಡೆಯುವುದನ್ನು ಕಲಿಸುತ್ತಿದ್ದಾರೆ. ಸಾಧನೆಯ ವಿವಿಧ ಅಂಶಗಳನ್ನೂ ಚರ್ಚಿಸಲಾಯಿತು. ಸೋದರಿಯರ ಸಮೂಹವು ನಿಧಾನ ಪ್ರಗತಿ ಮತ್ತು ಭಾಗಿಗಳ ಹೆಚ್ಚಿನ ಲಾಭವನ್ನು ನಿರೀಕ್ಷಿಸುತ್ತಿದೆ.

## ಯುವ ಸಭೆ, ಮುಂಬಯಿ

ಎರಡು ದಿನಗಳ ಅಖಿಲ ಮಹಾರಾಷ್ಟ್ರ ಮತ್ತು ಗೋವಾ ಯುವ ಸಭೆಯು ಮಾರ್ಚ್ 5ರಂದು ಮಧ್ಯಾಹ್ನ 2ಘಂಟೆಗೆ ಪನ್ವೇಲ್‌ನ ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ಪ್ರಾರಂಭವಾಯಿತು. ಕಾರ್ಯಕ್ರಮದ ವಿಷಯ 'ಭ್ರಮೆಯ ಬಲೆಯಿಂದ ಬಿಡುಗಡೆ' ಎಂದಾಗಿತ್ತು. 150 ಅಭ್ಯಾಸಿಗಳು ಸಭೆಯಲ್ಲಿ ಪಾಲ್ಗೊಂಡರು. ಚರ್ಚಾವಸ್ತುವು ಗುರುಗಳ ಬೋಧನೆಯ ಮೇಲೆ ಆಧಾರಿತವಾಗಿದ್ದು, ಪುಣೆ ಮತ್ತು ಮುಂಬೈನ ಪ್ರಶಿಕ್ಷಕರ ಮಾರ್ಗದರ್ಶನದಲ್ಲಿ ತಯಾರಿಸಲಾಗಿತ್ತು. ಮಿಷನ್ನಿನ ಯುವಜನರ ಅಸಾಮಾನ್ಯ ಪ್ರತಿಭೆಯು ಈ ಸಂದರ್ಭದಲ್ಲಿ ಬೆಳಕಿಗೆ ಬಂದಿತು. ಪುಣೆಯ ಭಾಗಿಗಳು 'ಹೂ ಮೂವ್ಡ್ ಮಾಯ್ ಚೀಜ಼್' ಎಂಬ ಕಿರುನಾಟಕವನ್ನು ಪ್ರಸ್ತುತ ಪಡಿಸಿದರು. ಮುಂಬೈನ ಭಾಗಿಗಳು 'ಮುಂದಿನ ಕ್ಷಣದಲ್ಲಿ ಮರಣ ಹೊಂದುತ್ತೇವೆ ಎನ್ನುವಂತೆ ಈ ಕ್ಷಣ ಬದುಕು' ಎಂಬುದನ್ನು ಕಿರುನಾಟಕದ ಮೂಲಕ ಪ್ರಸ್ತುತ ಪಡಿಸಿದರು. ಸೋ.ಸಂಜಯ್ ಭಾಟಿಯಾ, ಸೋ. ಸಂತೋಷ ಶ್ರೀನಿವಾಸನ್ ಮತ್ತು ಸೋ. ಸುಭಾಷ್ ವೈದ್ಯರವರು ಹಂಚಿಕೊಂಡ ಅನುಭವಗಳು ಭಾಗಿಗಳಿಗೆ ಪ್ರೇರಣೆ ನೀಡಿತು. ಸಮೂಹ ಚರ್ಚೆ ಮತ್ತು ಸ್ವ ಪರಿಶೀಲನೆಗಳೂ ಸಹ ನಡೆದವು. ಶಿಬಿರದ ವಾತಾವರಣವು ಭಂಡಾರವನ್ನು ಹೋಲುತ್ತಿತ್ತು. ಗುರುಗಳ ಉಪಸ್ಥಿತಿಯು ಗಾಢವಾಗಿ ಅನುಭವಕ್ಕೆ ಬಂದಿತು. ಶಿಬಿರದಲ್ಲಿ ಪಾಲ್ಗೊಂಡ ಭಾಗಿಗಳೆಲ್ಲ ಉತ್ತಮ ಲಾಭ ಪಡೆದರು.








## ಹೋಟೆಲ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ಪರಿಚಯ ಕಾರ್ಯಕ್ರಮ,ವಡೋದರ,ಗುಜರಾತ್.

ಗುಜರಾತ್ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್‌ನ (ಜಿ.ಐ.ಹೆಚ್.ಎಮ್) ಹಾಗೂ ಪಾಂಡಿಚೇರಿ ವಿಶ್ವವಿದ್ಯಾಲಯದ ಎಂ.ಬಿ.ಎ ವಿದ್ಯಾರ್ಥಿಗಳಿಗಾಗಿ ಫೆಬ್ರವರಿ 26ರಂದು ಮುಕ್ತಸಭೆಯೊಂದನ್ನು ನಡೆಸಿ ಕೊಡಲಾಯಿತು. ಸಹಜಮಾರ್ಗದ ಪ್ರಮುಖ ವಿಷಯಗಳಾದ ಧ್ಯಾನ ಮತ್ತು ಶುದ್ಧೀಕರಣಗಳ ಬಗ್ಗೆ ಸರಳ ಉದಾಹರಣೆಗಳ ಮೂಲಕ ಸುಲಭವಾಗಿ ಅರ್ಥವಾಡಿಕೊಳ್ಳುವಂತಹ ಭಾಷೆಯಲ್ಲಿ ವಿವರಿಸಲಾಯಿತು. ಯುವಜನರು ಕ್ರಿಯಾಶೀಲತೆಯಿಂದ ಹಾಗೂ ಉತ್ಸಾಹದಿಂದ ತುಂಬಿತುಳುಕುತ್ತಿದ್ದರು. ಅವರು ತಮ್ಮ ಕಾಲೇಜು ಜೀವನವನ್ನು ಮುಗಿಸಿ ಬಹಳ ಬೇಡಿಕೆಯಿರುವ ಹೋಟೆಲ್ ಉದ್ಯಮ ಎನ್ನುವ ಕ್ರೂರ ಪ್ರಪಂಚಕ್ಕೆ ಹೆಜ್ಜೆಯಿಡುವ ಹಂತದಲ್ಲಿರುವುದರಿಂದ,ಸಮತೋಲನದ ಜೀವನ ಹಾಗೂ ಹೃದಯದ ದನಿಯನ್ನು ಆಲಿಸುವುದು ಈ ವಿಷಯಗಳ ಬಗ್ಗೆ ವಿಶೇಷವಾಗಿ ವಿವರಿಸಲಾಯಿತು.ಯುವ ಭಾಷಣಕಾರರ ಮಾತುಗಳನ್ನು ವಿದ್ಯಾರ್ಥಿಗಳು ಬಹಳ ಆಸಕ್ತಿಯಿಂದ ಆಲಿಸಿದರು. ಭಾಗವಹಿಸಿದ್ದ 92 ವಿದ್ಯಾರ್ಥಿಗಳಲ್ಲಿ 56 ವಿದ್ಯಾರ್ಥಿಗಳು ಧ್ಯಾನವನ್ನು ಪ್ರಾರಂಭಿಸಲು ಆಸಕ್ತರಾಗಿದ್ದರು.ಸಹಜಮಾರ್ಗದ ಹಸ್ತಪ್ರತಿಗಳನ್ನು ವಿತರಿಸಲಾಯಿತು.ಅತ್ಯಂತ ಉತ್ಸಾಹಭರಿತರಾಗಿದ್ದ ಈ ವಿದ್ಯಾರ್ಥಿಗಳಿಗೆ ತಮ್ಮನ್ನು ತಾವು ಸರಿಯಾದ ದಾರಿಯಲ್ಲಿ ತೊಡಗಿಸಿಕೊಳ್ಳಲು ಇದೊಂದು ಸದವಕಾಶ ಎಂದು ಆಶಿಸಲಾಯಿತು.ಈ ಸಂಸ್ಥೆಯ ನಿರ್ದೇಶಕರು ಬಹಳ ಸಂತೋಷಗೊಂಡು ಇನ್ನೂ ಈ ರೀತಿಯ ಕಾರ್ಯಾಗಾರಗಳನ್ನು ಎದುರುನೋಡುತ್ತಿರುವರು.

## ತಂದೆ-ತಾಯಿಯರ ಜವಾಬ್ದಾರಿಗಳ ಬಗ್ಗೆ ಕಾರ್ಯಾಗಾರ, ವಡೋದರ, ಗುಜರಾತ್.

ಬರೋಡಾ ಪ್ರೌಢಶಾಲೆಯ ವಿದಾರ್ಥಿಗಳ ಪೋಷಕರಿಗಾಗಿ ಕಾರ್ಯಾಗಾರ ನಡೆಸುವ ಅವಕಾಶವು ವಿ.ಬಿ.ಎಸ್.ಸಿ ಸ್ವಯಂಸೇವಕರಿಗೆ ಒದಗಿಬಂದಿತ್ತು. ಕುಟುಂಬದ ವಾತಾವರಣ,ಮಕ್ಕಳ ಮೇಲಿನ ಪೋಷಕರ ನಿರೀಕ್ಷೆಗಳು,ಪೋಷಕರ ಮೇಲಿನ ಮಕ್ಕಳ ನಿರೀಕ್ಷೆಗಳು,ಮಕ್ಕಳ ಭಾವನೆಗಳನ್ನು ನಿಭಾಯಿಸುವುದು,ಪ್ರೇಮ,ಶಿಸ್ತು,ಸ್ವಾತಂತ್ರ್ಯ ಹಾಗೂ ಪರಿಸರ ಹೀಗೆ ಅನೇಕ ವಿಷಯಗಳ ಬಗೆಗಿನ ಗುಂಪುಚರ್ಚೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು.ಪೋಷಕರು ಮತ್ತು ಬೆಳೆಯುವ ಮಕ್ಕಳ ನಡುವೆ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡೇ ವಿಷಯಗಳನ್ನು ಆಯ್ಕೆ ಮಾಡಲಾಗಿತ್ತು.ಸಹಜಮಾರ್ಗದ ದೃಷ್ಟಿಯಲ್ಲಿ ತಂದೆತಾಯಿಯರ ಜವಾಬ್ದಾರಿಗಳ ಬಗ್ಗೆ ನಮ್ಮ ಪ್ರಶಿಕ್ಷಕರು ಮಾತನಾಡಿದರು.ಸ್ವತಃ ಒಬ್ಬ ಪೋಷಕರಾಗಿ ತಮ್ಮ ಸ್ವಂತದ ಅನುಭವಗಳನ್ನು ಹಂಚಿಕೊಳ್ಳುತ್ತಾ,ಶಾಂತ ಮನಸ್ಸಿನಿಂದ ಹಾಗೂ ತೆರೆದ ಹೃದಯ ಹೊಂದಿದವರಾಗಿ ಹೇಗೆ ಕಷ್ಟದ ಸನ್ನಿವೇಶಗಳನ್ನು ನಿಭಾಯಿಸಿದರೆಂದು ತಿಳಿಸಿದರು.ಎಲ್ಲಾ ತಂದೆತಾಯಿಯರೂ ಕಾರ್ಯಕ್ರಮದಲ್ಲಿ 3 ಗಂಟೆಗಳ ಕಾಲ ಬಹಳ ಸಕ್ರಿಯವಾಗಿ ಭಾಗವಹಿಸುತ್ತಾ ಸ್ವಯಂ ಸೇವಕರೊಂದಿಗೆ ಪ್ರತಿಸ್ಪಂದನವನ್ನೂ ನಡೆದರು.ಕಾರ್ಯಾಗಾರದಲ್ಲಿ ಭಾಗವಹಿಸಿದ್ದ 30 ಜನರಲ್ಲಿ 15 ಜನರು ಧ್ಯಾನವನ್ನು ಪ್ರಾರಂಭಿಸಲು ಆಸಕ್ತಿ ತೋರಿದರು.ಕಾರ್ಯಕ್ರಮವನ್ನು ಬಹಳ ಮೆಚ್ಚಿಕೊಳ್ಳಲಾಯಿತು ಹಾಗೂ ಭವಿಷ್ಯದಲ್ಲಿಯೂ ಸಹ ಈ ರೀತಿಯ ಕಾರ್ಯಾಗಾರಗಳನ್ನು ನಡೆಸಿಕೊಡುವಂತೆ ಶಾಲೆಯ ವತಿಯಿಂದ ವಿನಂತಿಸಿಕೊಳ್ಳಲಾಯಿತು.



## "ಪ್ರಕೃತಿ ಮತ್ತು ನಾನು" – ಬೇಸಿಗೆ ಶಿಬಿರ,ಬೆಂಗಳೂರು.

ಬೆಂಗಳೂರಿನ ಬನಶಂಕರಿ ಆಶ್ರಮದಲ್ಲಿ ಏಪ್ರಿಲ್ 8ರಿಂದ 10ರ ವರೆಗೆ ನಡೆದ 3 ದಿನದ ನಿವಾಸಿ ಶಿಬಿರದಲ್ಲಿ 7ರಿಂದ 15 ವರ್ಷ ವಯೋಮಾನದ ಸುಮಾರು 80 ಮಕ್ಕಳು ಭಾಗವಹಿಸಿದ್ದರು.

ಪ್ರಕೃತಿಯಲ್ಲಿರುವ ಪ್ರಮುಖ 5 ಅಂಶಗಳ ಪ್ರಕಾರ ಮಕ್ಕಳನ್ನು 5 ಗುಂಪುಗಳಾಗಿ ವಿಂಗಡಿಸಲಾಗಿತ್ತು.ಪ್ರತೀ ತಂಡದಲ್ಲಿಯೂ ಗುಂಪುಚರ್ಚೆ,ಕಲೆ,ಕರಕುಶಲ ಚಟುವಟಿಕೆಗಳು ಹಾಗೂ ವಿಷಯಗಳ ಬಗ್ಗೆ ಪ್ರದರ್ಶನಗಳಿದ್ದವು.ಔಷಧೀಯ ಸಸ್ಯವೊಂದರ ಬಗೆಗಿನ ಪ್ರದರ್ಶನವೊಂದು ಈ ವಿಷಯದಲ್ಲಿ ಸಸ್ಯಗಳ ಬಗ್ಗೆ ಅವರ ಆಸಕ್ತಿಯನ್ನು ಕೆರಳಿಸಿತು.ಪಂಚೇಂದ್ರಿಯಗಳ ಕುರಿತ ಆಟವೊಂದರಿಂದ ನಾವು ನಿಜವಾಗಿಯೂ ಅವುಗಳನ್ನು ಎಷ್ಟು ಕಡಿಮೆ ಬಳಸುತ್ತಿದ್ದೇವೆ ಎಂಬುದನ್ನು ಮನವರಿಕೆ ಮಾಡಿಕೊಂಡರು.

ಪುನರುಪಯೋಗ,ಮರುಉಪಯೋಗ ಹಾಗೂ ಕಡಿಮೆ ಉಪಯೋಗ ಈ ವಿಷಯಗಳನ್ನು ಪರಿಚಯಮಾಡಿಸುವುದರೆಡೆಗೆ ಎರಡನೆಯ ದಿನವು ಕೇಂದ್ರೀಕೃತವಾಗಿತ್ತು.ಪರಿಣತರೊಬ್ಬರು ಮಳೆಯ ನೀರಿನ ಸಂಗ್ರಹಣೆಯ ಬಗ್ಗೆ ನೈಜವಾಗಿ ಪ್ರಯೋಗಮಾಡಿ ತೋರಿಸಿದರು. "ಕಸದಿಂದ ರಸ"ದ ಕಲೆ ಮತ್ತು ಕರಕುಶಲ ಚಟುವಟಿಕೆಗಳು ಮಕ್ಕಳನ್ನು ಕಾಗದದಿಂದ ದಿನಚರಿಗಳು,ಆಕರ್ಷಕ ಬಟ್ಟಲುಗಳು ಹಾಗೂ ಪೆನ್ ಸ್ಟ್ಯಾಂಡ್‌ಗಳು, ಹಳೆಯ ಬಾಟಲಿಗಳ ಸಹಾಯದಿಂದ ಹೂವಿನ ಕುಂಡಗಳನ್ನು ತಯಾರಿಸುವುದರಲ್ಲಿ ಕಾರ್ಯನಿರತರಾಗಿರುವಂತೆ ಮಾಡಿದ್ದವು. ಕುಂಬಾರನ ಚಕ್ರದಿಂದ ಮಡಕೆ ತಯಾರಿಸಿದಾಗಲಂತೂ ಮಕ್ಕಳು ಬಹಳ ಸಂತೋಷಪಟ್ಟರು.ಇದರ ನಂತರ ನಿಧಿ ಅನ್ವೇಷಣೆ ಆಟ,ಪ್ರಶ್ನಾವಳಿ,ಬೊಂಬೆಯಾಟ ಹಾಗೂ ಚಲನಚಿತ್ರ ಪ್ರದರ್ಶನಗಳಿದ್ದವು.

ಮೂರನೆಯ ದಿನದ ಕಾರ್ಯಕ್ರಮವು "ಅಂತರಂಗದ ಪ್ರಕೃತಿ" ಎಂಬ ವಿಷಯದ ಬಗ್ಗೆ ಕೇಂದ್ರೀಕೃತವಾಗಿತ್ತು.ಈ ವಿಷಯದ ಬಗ್ಗೆ ಆಟಗಳನ್ನು ಆಡಿಸಲಾಯಿತು ಹಾಗೂ ವಿ.ಬಿ.ಎಸ್.ಸಿ ಪಠ್ಯಕ್ರಮದಲ್ಲಿ ಈ ವಿಷಯದ ಬಗೆಗಿರುವ ಅಭಿಪ್ರಾಯಗಳನ್ನು ವಿವರಿಸಿಲಾಯಿತು.ಮಕ್ಕಳ ಕರಕುಶಲದ ವಸ್ತುಪ್ರದರ್ಶನವನ್ನು ಪೋಷಕರಿಗಾಗಿ ಆಯೋಜಿಸಲಾಗಿತ್ತು.ಪ್ರೇಮ,ಧೈರ್ಯ ಮತ್ತು ಸಂತೃಪ್ತಿ ಈ ವಿಷಯಗಳ ಬಗ್ಗೆ ಬಹಳ ಸೃಜನಾತ್ಮಕವಾಗಿ ಕಿರು ನಾಟಕಗಳನ್ನು ಸಹ ಪ್ರತೀ ತಂಡದ ಮಕ್ಕಳು ಪ್ರದರ್ಶಿಸಿದರು.

ಬಹಳ ಮೋಜಿನಿಂದ ತುಂಬಿದ್ದ ಶಿಬಿರದಲ್ಲಿ ಮಕ್ಕಳು ಆಟಗಳ ಮೂಲಕ,ಪ್ರತಿಸ್ಪಂದನದ ಮೂಲಕ,ಕಿರು ನಾಟಕಗಳ ಮೂಲಕ ಬಹಳ ಸೂಕ್ಷ್ಮ ರೀತಿಯಲ್ಲಿ ಮೌಲ್ಯಗಳನ್ನು ಕಲಿತರು.



# ಪ್ರಬಂಧ ಲೇಖನ ಕಾರ್ಯಕ್ರಮದ ಮಾನ್ಯತಾ ಪತ್ರಗಳ ವಿತರಣೆ

ದೆಹಲಿ: ಫೆಬ್ರವರಿ 26ರಂದು ಸೋ. ಎ.ಪಿ.ಪಾಲ್ಟಾ (ವಲಯಮುಖ್ಯಸ್ಥ) ಅವರು 17 ವಲಯಮಟ್ಟದ ಹಾಗೂ ಓರ್ವ ರಾಷ್ಟ್ರೀಯ ಮಟ್ಟದ ಬಹುಮಾನ ವಿಜೇತರಿಗೆ ಬಹುಮಾನಗಳನ್ನು ನೀಡಿದರು. ಸೋ. ಪಾಲ್ಟಾರವರು ಮಾತನಾಡುತ್ತಾ ಈ ರೀತಿಯ ಕಾರ್ಯಕ್ರಮಗಳು ಯಾವ ರೀತಿಯಲ್ಲಿ ಮಕ್ಕಳಲ್ಲಿ ಮಾನವೀಯ ಮೌಲ್ಯಗಳಿಗೆ ಉತ್ತೇಜನ ನಿಡುತ್ತಾ ಉತ್ತಮ ಭವಿಷ್ಯದ ನಿರ್ಮಾಣಕ್ಕೆ ನಾಂದಿಯಾಗುತ್ತವೆ ಎಂದು ಹೇಳಿದರು. ಬಹುಮಾನ ವಿಜೇತರು ಸಂಸ್ಥೆಗೆ ಧನ್ಯವಾದಗಳನ್ನು ತಿಳಿಸುತ್ತಾ ಪ್ರಬಂಧ ರಚನೆಯ ಸಂದರ್ಭದಲ್ಲಿನ ತಮ್ಮ ಅನುಭವಗಳನ್ನು ಹಾಗೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.


ದೆಹಲಿ

ಮಧುರೈ: ಫೆಬ್ರವರಿ 2ರಂದು 700ಕ್ಕಿಂತಲೂ ಅಧಿಕ ಅಭ್ಯಾಸಿಗಳು,200 ವಿದ್ಯಾರ್ಥಿಗಳು,100 ಪೋಷಕರು ಹಾಗೂ ಶಿಕ್ಷಕರು ಮೇಳೈಸಿದ್ದರು.ಶ್ರೀಮತಿ ಪದ್ಮ ರಾಮಚಂದ್ರನ್ ಹಾಗೂ ಮಧುರೈ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಪಿ ರಾಮಚಂದ್ರನ್ ಅವರು ಬಹುಮಾನ ವಿತರಣೆ ಮಾಡಿದರು.ಆಲ್ ಇಂಡಿಯಾ ರೇಡಿಯೋದ ಕಾರ್ಯನಿರ್ವಾಹಕರಾದ ಶ್ರೀ ಅಶೋಕ್‌ರವರು ಆಧ್ಯಾತ್ಮಿಕ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು.


ಮಧುರೈ

ಮುಜಾಫರ್‌ಪುರ್: ಫೆಬ್ರವರಿ 27ರಂದು ನಡೆದ ಕಾರ್ಯಕಮದಲ್ಲಿ ಶ್ರೀ ಎಸ್.ಎಮ್ ರಾಜುರವರು (ಐಎಎಸ್) ಮುಖ್ಯ ಅತಿಥಿಗಳಾಗಿದ್ದರು.ಪ್ರಾಂಶುಪಾಲರು, ಶಿಕ್ಷಕರು ಹಾಗೂ ಪೋಷಕರೂ ಸೇರಿದಂತೆ ಸುಮಾರು 150 ಜನರು ಉಪಸ್ಥಿತರಿದ್ದರು.ಬಹುಮಾನ ವಿತರಣೆಯ ನಂತರ ಶ್ರೀ ಎಸ್.ಎಮ್.ರಾಜುರವರು ಧ್ಯಾನ,ಸ್ವ–ನಿಯಂತ್ರಣ ಹಾಗೂ ಚಾರಿತ್ರ್ಯ ನಿರ್ಮಾಣದ ಬಗ್ಗೆ ಸಹಜ ಮಾರ್ಗವು ಯುವಜನರಲ್ಲಿ ಜಾಗೃತಿ ಮೂಡಿಸುತ್ತಿರುವುದನ್ನು ಬಹಳ ಮೆಚ್ಚಿಕೊಂಡರು.ವಿದ್ಯಾರ್ಥಿಗಳು ಮತ್ತು ಪೋಷಕರು ಭವಿಷ್ಯದಲ್ಲಿ ಈ ರೀತಿಯ ಕಾರ್ಯಕ್ರಮಗಳಲ್ಲಿ ಇನ್ನೂ ಉತ್ಸಾಹದಿಂದ ಭಾಗವಹಿಸುವುದಾಗಿ ಭರವಸೆ ನೀಡಿದರು.


ಮುಜಫ್ಫರ್‌ಪುರ

ರೋಟಕ್: ಫೆಬ್ರವರಿ 8ರಂದು ಇಲ್ಲಿನ ಎಮ್.ಡಿ ವಿಶ್ವವಿದ್ಯಾಲಯದ ಅಂಬೇಡ್ಕರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪ–ಕುಲಪತಿಗಳಾದ ಪ್ರೊ॥ಆರ್.ಪಿ.ಹೂಡಾರವರು ಹಾಗೂ ಅವರ ಪತ್ನಿ ವೇದವತಿ ಹೂಡಾರವರು ಮುಖ್ಯಾತಿಥಿಗಳಾಗಿದ್ದರು. ವಿದ್ಯಾರ್ಥಿಗಳು,ಪೋಷಕರು,ಬೋಧಕ ವರ್ಗದವರು,ಅಭ್ಯಾಸಿಗಳು ಮತ್ತು ಅವರ ಮಕ್ಕಳೂ ಸೇರಿದಂತೆ ಸುಮಾರು 400 ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಪ್ರಬಂಧ ಲೇಖನ ಕಾರ್ಯಕ್ರಮ,ಎಸ್.ಆರ್.ಸಿ.ಎಮ್,ಯು.ಎನ್.ಐ.ಸಿ,ವಿ.ಬಿ.ಎಸ್.ಸಿ ಹಾಗೂ ಸಹಜ ಮಾರ್ಗ ಈ ವಿಷಯಗಳ ಕುರಿತ ಭಾಷಣಗಳಿದ್ದವು.

ಚಂಡೀಗಢ: ಕಾರ್ಯಕ್ರಮವು ಫೆಬ್ರವರಿ 18ರಂದು ಪಂಜಾಬ್ ವಿಶ್ವವಿದ್ಯಾಲಯದ ಗೋಲ್ಡನ್ ಜ್ಯೂಬಿಲೀ ಹಾಲ್‌ನಲ್ಲಿ ಜರುಗಿತು.ಕಲಾ ವಿಭಾಗದ ಶಿಕ್ಷಕರಾದ ಡೀನ್ ಅವರನ್ನು ಮುಖ್ಯಾತಿಥಿಗಳಾಗಿ ಆಹ್ವಾನಿಸಲಾಗಿತ್ತು ಹಾಗೂ ಕಾರ್ಯಕ್ರಮದಲ್ಲಿ "ತಾರುಣ್ಯ: ಪ್ರತಿಜ್ಞೆ ಮತ್ತು ಪರಿಶ್ರಮಕ್ಕೆ ಸಕಾಲ" ಎಂಬುದು ಪ್ರಧಾನ ವಿಷಯವಾಗಿತ್ತು.ಒಂದು ಕಿರು ದೃಶ್ಯಾವಳಿಯ ನಂತರ ಬಹುಮಾನಗಳನ್ನು ವಿತರಣೆ ಮಾಡಲಾಯಿತು.


ಚಂಡೀಗಢ

ಪಟ್ಟಾಂಬಿ: ಫೆಬ್ರವರಿ 27ರಂದು ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 8 ಜನ ಬಹುಮಾನ ವಿಜೇತರಿಗೆ ಮಾನ್ಯತಾ ಪತ್ರಗಳನ್ನು ನೀಡಲಾಯಿತು.ಅನೇಕ ವಿದ್ಯಾರ್ಥಿಗಳು,ಪೋಷಕರು ಹಾಗೂ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು.ಸಹೋದರರಾದ ರಮಣ್ ಭಟ್ಟಾತಿರಿಪಾದ್ ಮತ್ತು ನಾರಾಯಣನ್‌ರವರು ಮಾನ್ಯತಾ ಪತ್ರಗಳನ್ನು ವಿತರಿಸಿದರು.ಎಲ್ಲಾ ವಿದ್ಯಾರ್ಥಿಗಳೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.ಮಾನವೀಯ ಮೌಲ್ಯಗಳನ್ನು ಮಕ್ಕಳಲ್ಲಿ ತುಂಬುವಲ್ಲಿ ಸಂಸ್ಥೆಯ ಪಾತ್ರವನ್ನು ಪೋಷಕರು ಬಹಳ ಮೆಚ್ಚಿಕೊಂಡರು.


ಮೀರತ್

ಮೀರತ್: ಶಾಲೆ,ಕಾಲೇಜು ಹಾಗೂ ಇತರ ವಿದ್ಯಾಸಂಸ್ಥೆಗಳೂ ಸೇರಿದಂತೆ 484 ಸಂಸ್ಥೆಗಳಿಂದ ಸುಮಾರು ಮೂರೂ ವಿಭಾಗದಿಂದ ಸುಮಾರು 16653 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೌಲ್ಯಮಾಪನದ ನಂತರ 647 ವಿದ್ಯಾರ್ಥಿಗಳಿಗೆ ಮಾನ್ಯತಾ ಪತ್ರಗಳನ್ನು ನೀಡಲಾಯಿತು.ಎಲ್ಲಾ ಅಭ್ಯರ್ಥಿಗಳನ್ನು ಅವರವರ ಪೋಷಕರು ಹಾಗೂ ಶಿಕ್ಷಕರೊಂದಿಗೆ ಬರುವಂತೆ ಆಹ್ವಾನಿಸಲಾಗಿತ್ತು.ಪ್ರಶಿಕ್ಷಕರು ಸಹಜ ಮಾರ್ಗದ ಪರಿಚಯ ಮಾಡಿಕೊಟ್ಟರು ಹಾಗೂ ಹಸ್ತಪ್ರತಿಗಳನ್ನು ಹಾಗೂ ಸಂಸ್ಥೆಯ ಸಾಹಿತ್ಯವನ್ನೂ ಎಲ್ಲರಿಗೂ ಒದಗಿಸಲಾಗಿತ್ತು.

ಫೆಬ್ರವರಿ 20ರಂದು ಸುಲ್ತಾನ್‌ಪುರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 600 ವಿದ್ಯಾರ್ಥಿಗಳು,ಅವರ ಪೋಷಕರು ಹಾಗೂ ಜಿಲ್ಲೆಯ ಸುಮಾರು 97 ಕಾಲೇಜುಗಳಿಂದ ಪ್ರಾಂಶುಪಾಲರುಗಳು ಭಾಗವಹಿಸಿದ್ದರು.ವಿದ್ಯಾರ್ಥಿಗಳು ಆಶ್ರಮದ ವಾತಾವರಣದಿಂದ ಬಹಳ ಪ್ರಭಾವಿತರಾಗಿ ಸಂಸ್ಥೆಯ ಬಗ್ಗೆ ತಿಳಿದುಕೊಳ್ಳಲು ಬಹಳ ಉತ್ಸುಕರಾಗಿದ್ದರು.ಸುತ್ತಮುತ್ತಲಿನ ಅಲಹಾಬಾದ್,ಜೌನ್‌ಪುರ್ ಹಾಗೂ ವಾರಣಾಸಿ ಕೇಂದ್ರದ ಅಭ್ಯಾಸಿಗಳೂ ಕಾರ್ಯಕ್ರಮದಲ್ಲಿ ಭಾಗವಸಿದರು.ಆಧ್ಯಾತ್ಮಿಕತೆಯಲ್ಲಿ ಯುವಜನರ ಪಾತ್ರ ಎನ್ನುವ ಬಗ್ಗೆ ಡಾ॥ ಶಿವ್ ಮೋಹನ್‌ರವರು ಮಾತನಾಡಿದರು.


ಸುಲ್ತಾನ್‌ಪುರ

ಮೊರಾದಾಬಾದ್ ಆಶ್ರಮದಲ್ಲಿ ಫೆಬ್ರವರಿ 27ರಂದು 95 ಶಾಲೆಗಳಿಂದ ಸುಮಾರು 180 ವಿದ್ಯಾರ್ಥಿಗಳು ಅವರ ಪೋಷಕರು ಮತ್ತು ಶಿಕ್ಷಕರೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಸಹೋದರಿ ನೀಲಂರವರು


ಶಹಜಹಾನ್‌ಪುರ

ಪ್ರಬಂಧದ ವಿಷಯಗಳ ಬಗ್ಗೆ ಮಾತನಾಡಿದರು.ಸಹೋದರ ಶರ್ವಣ್ ಕುಮಾರ್ ಅವರು ವಿಜೇತರಿಗೆ ಮಾನ್ಯತಾ ಪತ್ರಗಳನ್ನು ನೀಡಿದರು.ಅತಿಥಿಗಳು ಅಲ್ಲಿನ ವಾತಾವರಣವನ್ನು ಆನಂದದಿಂದ ಆಸ್ವಾದಿಸಿದರು ಹಾಗೂ ಅನೇಕರು ಸಹಜ ಮಾರ್ಗದ ಬಗ್ಗೆ ವಿಚಾರಿಸುತ್ತಾ ಧ್ಯಾನವನ್ನು ಪ್ರಾರಂಭಿಸುವ ಆಸಕ್ತಿಯನ್ನು ತೋರಿದರು.

ಶಹಜಹಾನ್‌ಪುರ್ ಕೇಂದ್ರದಲ್ಲಿ ಫೆಬ್ರವರಿ 27ರಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೇಂದ್ರದೆಲ್ಲೆಡೆಯ ಸುಮಾರು 45 ವಿದ್ಯಾಸಂಸ್ಥೆಗಳಲ್ಲಿ ಸ್ಪರ್ಧೆಯಲ್ಲಿ ನಡೆಸಲಾಗಿತ್ತು.ಮುಖ್ಯಾತಿಥಿಗಳಾದ ಡಾ॥ ರಾಮ ಶಂಕರ್ ಮೌರ್ಯ (ಎ.ಡಿ.ಎಮ್) ಅವರು ಮಾನ್ಯತಾ ಪತ್ರಗಳನ್ನು ವಿತರಿಸಿದರು.ಸಹೋದರ ಭಗ್‌ವಾನ್ ದಾಸ್‌ರವರು ಪ್ರಬಂಧ ಕಾರ್ಯಕ್ರಮದ ಹಿಂದಿರುವ ಉದ್ದೇಶವನ್ನು ವಿವರಿಸಿದರು.

ಗುಲ್ಬರ್ಗಾ: ಫೆಬ್ರವರಿ 2ರಂದು ಸುಮಾರು 50 ವಿದ್ಯಾರ್ಥಿಗಳು ಅವರ ಪೋಷಕರು ಮತ್ತು ಶಿಕ್ಷಕರೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.ಸಹೋದರರಾದ ಪ್ರಹ್ಲಾದ್ ಪಾಕಣೀಕರ್,ಶ್ರೀಕಾಂತ್ ಜೋಶಿ ಹಾಗೂ ರಾಜುರವರು ಸಹಜ ಮಾರ್ಗದ ಪ್ರಮುಖ ಲಕ್ಷಣಗಳ ಬಗ್ಗೆ ವಿವರಿಸಿದರು.

ಹುಬ್ಬಳ್ಳಿ: ಫೆಬ್ರವರಿ 13ರಂದು ನಡೆದ ಕಾರ್ಯಕ್ರಮದಲ್ಲಿ ಮುಖ್ಯಾಧಿಕಾರಿಗಳಗಿದ್ದ ಹೆಚ್ಚುವರಿ ಶಿಕ್ಷಣ ಮುಖ್ಯಾಧಿಕಾರಿಗಳಗಿರುವ ಶ್ರೀ ವಿ.ಎ.ಮಾಚಕನೂರ್(ಕೆ.ಎ.ಎಸ್) ರವರು ನಾವು ಅವರ ವಿಭಾಗದ ಕೆಲಸವನ್ನೇ ಮಾಡುತ್ತಿದ್ದೇವೆಂದು ಬಹಳ ಸಂತೋಷಪಟ್ಟರು.ಶಿಕ್ಷಣದಲ್ಲಿ ಮೌಲ್ಯಗಳ ಅವಶ್ಯಕತೆಗಳ ಬಗ್ಗೆ ಒತ್ತಿ ಹೇಳಿದರು.ಸಹೋದರ ಡಾ॥ ಬರ್‌ಕೋಲ್‌ರವರು ಪ್ರಬಂಧ ಕಾರ್ಯಕ್ರಮದ ಹಿಂದಿನ ಉದ್ದೇಶವನ್ನು ಹಾಗೂ ಯುವಜನರು ರೂಪಗೊಳ್ಳುತ್ತಿರುವ ಈ ಅವಧಿಯಲ್ಲಿ ಅವರ ಮೇಲಿನ ಇದರ ಪರಿಣಾಮದ ಬಗ್ಗೆ ವಿವರಿಸಿದರು.ಸಹೋದರ ರಾಜುರವರು ಸಹಜ ಮಾರ್ಗ ಪದ್ಧತಿಯ ಬಗ್ಗೆ ವಿವರಿಸಿದರು.

ಬೀದರ್: ಫೆಬ್ರವರಿ 27ರಂದು ಸರಿಸುಮಾರು 50 ವಿದ್ಯಾರ್ಥಿಗಳು,ಶಿಕ್ಷಕರು ಹಾಗೂ ಪೋಷಕರು ಈ ಸುಸಂದರ್ಭದಲ್ಲಿ ಭಾಗವಹಿಸಿದ್ದರು.ಕೇಂದ್ರದ ಅಧಿಕಾರಿಗಳಾದ ಸಹೋದರ ಹರಿಲಾಲ್ ಚವಾಣ್‌ರವರು ಪ್ರಬಂಧ ಕಾರ್ಯಕ್ರಮದ ಉದ್ದೇಶ ಹಾಗೂ 2010ರಲ್ಲಿ ನೀಡಿದ ಭಾರೀ ಪ್ರತಿಕ್ರಿಯೆಯ ಬಗ್ಗೆ ಮಾತನಾಡಿದರು.ಸಹೋದರ ರಾಜುರವರು ಆಧ್ಯಾತ್ಮಿಕತೆಯ ಅವಶ್ಯಕತೆಯ ಬಗ್ಗೆ ಹಾಗೂ ಸಹಜ ಮಾರ್ಗದ ಸಿದ್ಧಾಂತಗಳ ಕುರಿತು ಮಾತನಾಡಿದರು.ವಿದ್ಯಾರ್ಥಿಗಳಿಗೆ ಹಾಗೂ ವಿದ್ಯಾಸಂಸ್ಥೆಗಳಿಗೆ ಮಾನ್ಯತಾ ಪತ್ರಗಳನ್ನು ನೀಡಲಾಯಿತು.18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸಹಜ ಮಾರ್ಗ ಸಾಧನೆ ಪುಸ್ತಕವನ್ನು ನೀಡಲಾಯಿತು.

ಅನೇಕ ವಿದ್ಯಾರ್ಥಿಗಳು ಪ್ರಬಂಧ ಲೇಖನದ ಸಿದ್ಧತೆಯ ಅನುಭವಗಳನ್ನು ಹಂಚಿಕೊಂಡರು.ಚಾರಿತ್ರ್ಯ ನಿರ್ಮಾಣ,ಸ್ವಾತಂತ್ರ್ಯ,ಮಹದಾಸೆ ಮತ್ತು ಆಕಾಂಕ್ಷೆ ಇಂತಹ ವಿಷಯಗಳ ಬಗ್ಗೆ ಈ ಮೊದಲು ಎಂದೂ ಚಿಂತನ ಮಾಡಿರಲಿಲ್ಲ ಎಂದು ತಿಳಿಸಿದರು.ಸಿದ್ಧತೆಯ ಸಮಯದಲ್ಲಿ ಅವರಿಗೆ ವಿಷಯದ ನಿಜವಾದ ಅರ್ಥ ಅರಳುತ್ತಿದ್ದುದ್ದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದರು.ಪೋಷಕರೂ ಸಹ ಪ್ರಬಂಧ ವಿಷಯಗಳ ಬಗ್ಗೆ ಹರ್ಷವನ್ನು ಹಾಗೂ ಈ ನಿಟ್ಟಿನಲ್ಲಿ ಸಂಸ್ಥೆಯ ಪ್ರಯತ್ನಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.ಕೆಲವರು ಧ್ಯಾನವನ್ನು ಪ್ರಾರಂಭಿಸುವ ಆಸಕ್ತಿಯನ್ನೂ ತೋರಿದರು.

ಬಳ್ಳಾರಿ: ಫೆಬ್ರವರಿ 2ರಂದು ನಡೆದ ಕಾರ್ಯಕ್ರಮದಲ್ಲಿ 7 ಶಾಲೆಗಳಿಂದ ಸುಮಾರು 25 ಜನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.ಎಸ್.ಆರ್.ಸಿ.ಎಮ್ ನ ಪರಿಚಯದ ನಂತರ ವಿದ್ಯಾರ್ಥಿಗಳು ಈ ಪ್ರಬಂಧ ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.ಅವರು ಆಧ್ಯಾತ್ಮಿಕತೆಯ ಬಗ್ಗೆ ಹಾಗೂ ಜೀವನದಲ್ಲಿ ಮೌಲ್ಯಗಳ ಬಗ್ಗೆ ಅವರು ಎಷ್ಟು ಆಳವಾಗಿ ಯೋಚಿಸಿದ್ದಾರೆಂಬುದು ಗೋಚರವಾಗುತ್ತಿತ್ತು.

ಹುಮ್ನಾಬಾದ್: ಮಾರ್ಚ್ 6ರಂದು ಸಹೋದರ ಬಕ್ಕರೆಡ್ಡಿಯವರ ಮನೆಯಲ್ಲಿ ಸುಮಾರು 15 ಜನರ ಉಪಸ್ಥಿತಿಯಲ್ಲಿ ಕಾರ್ಯಕ್ರಮವು ಜರುಗಿತು.ವಿದ್ಯಾರ್ಥಿಗಳಿಗೆ ಮಾನ್ಯತಾ ಪತ್ರಗಳನ್ನು ವಿತರಿಸಲಾಯಿತು.ಸಹೋದರ ಶ್ರೀಕಾಂತ್ ಜೋಶಿ ಅವರು ಆಧ್ಯಾತ್ಮ ಒಂದು ಅವಶ್ಯಕತೆ ಕುರಿತು ಮಾತನಾಡಿದರು.

ಲಖ್ನೋ: ಲಖ್ನೋ ನಗರದಲ್ಲಿ ಸುಮಾರು 95 ವಿದ್ಯಾಸಂಸ್ಥೆಗಳಲ್ಲಿ ಪ್ರಬಂಧ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಫೆಬ್ರವರಿ 27ರಂದು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು,ಪೋಷಕರು ಹಾಗೂ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಮುಖ್ಯಾತಿಥಿಗಳಾದ ಲಖ್ನೋ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ॥ ಎ.ಕೆ.ಶ್ರೀವಾಸ್ತವ ಅವರು ಬಹುಮಾನಗಳ ವಿತರಣೆ ಮಾಡಿದರು.


ಶಹಜಹಾನ್‌ಪುರ


ಗುಲ್ಬರ್ಗಾ



ಹುಬ್ಬಳ್ಳಿ


ಬೀದರ್


ಬಳ್ಳಾರಿ


ಹುಮನಾಬಾದ್

ಸಂಪುಟ 4 ಸಂಚಿಕೆ 3 ಮೇ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ



## ಕರ್ನಾಟಕದ ಮಂಗಳೂರು ಕೇಂದ್ರಕ್ಕೆ ಸಹೋದರ ಎ.ಪಿ.ದೊರೈಯವರ ಭೇಟಿ.

ಸಂಸ್ಥೆ0ು ಜಂಟಿ ಕಾರ್ಯದರ್ಶಿಗಳಾದ ಸಹೋದರ ಎ.ಪಿ.ದೊರೈರವರು ಫೆಬ್ರವರಿ 24ರಂದು ಮಂಗಳೂರು ಕೇಂದ್ರಕ್ಕೆ ಭೇಟಿನೀಡಿದರು.ಅವರನ್ನು ಸಂಧಿಸಲು ಸುಮಾರು 50 ಅಭ್ಯಾಸಿಗಳು ನೆರೆದಿದ್ದರು.ಹೊಸ ಅಭ್ಯಾಸಿಗಳಿಗೆ ನೆರವಾಗಲೆಂದು ಸಹೋದರಿ ನಳಿನಿ0ುವರು ಪ್ರಾರ್ಥನೆ0ು ಅರ್ಥವನ್ನು ವಿವರಿಸಿದರು.

ಆಶ್ರಮಕ್ಕಾಗಿ ಒಂದು ಜಮೀನನ್ನು ಖರೀದಿಸುವ ಸಲುವಾಗಿ ಸಹೋದರರಾದ ಸುಬ್ರಾ0ು ಪೈ,ಪ್ರಸಾದ್ ಕೃಷ್ಣ,ಗಣೇಶ್,ರಾಧಾಕೃಷ್ಣ ಹಾಗೂ ಸಹೋದರಿ ಲತಾ ಹೊಳ್ಳ ಅವರನ್ನು ಒಳಗೊಂಡ ಸಮಿತಿ0ುನ್ನು ನಿರ್ಮಿಸಲಾಯಿತು.ಅವರು ಈ ಕೆಲಸವನ್ನು ಗುರುಗಳ ಮೇಲೆ ಸಂಪೂರ್ಣ ಶ್ರದ್ಧೆ0ುಳ್ಳವರಾಗಿ ಆರಂಭಿಸಿ ಬೇಕಾದ ನೆರವು ಸಿಗುವುದು ಎಂದು ಹೇಳಿದರು.

ಅಭ್ಯಾಸಿಗಳೊಂದಿಗಿನ ಈ ಪ್ರತಿಸ್ಪಂದನದಲ್ಲಿ ಸಹೋದರ ದೊರೈ ಅವರು ತಿಳಿಸಿದ ಕೆಲವು ಅಂಶಗಳು ಈ ಕೆಳಕಂಡಂತಿವೆ.

- "ನೀನೇ ನಮ್ಮನ್ನು ಆ ಹಂತಕ್ಕೆ ತರುವ ಏಕಮಾತ್ರ ದೈವ ಹಾಗೂ ಶಕ್ತಿ"–ಇದರ ಅರ್ಥವೇನು? ಗುರುಗಳನ್ನು ಸ್ವೀಕರಿಸುವುದರಿಂದ ಹಾಗೂ ಅವರೇ ದೈವ ಹಾಗೂ ಶಕ್ತಿ ಎಂಬ ಶ್ರದ್ಧೆ ಹೊಂದಿದಾಗ ನಮ್ಮಲ್ಲಿ ಧೈರ್ಯ ಹಾಗೂ ಆತ್ಮವಿಶ್ವಾಸ ಹೆಚ್ಚುತ್ತದೆ ಹಾಗೂ ಎಂತಹ ಪ್ರಭಾವಶಾಲಿಗಳ ತಪ್ಪು ಕಾಯಿದೆಗಳಿಗೂ ನಮ್ಮನ್ನು ಕುಗ್ಗದಂತೆ ಮಾಡುತ್ತದೆ.

- ಕೋಪವನ್ನು ನಮ್ಮ ತಪ್ಪುಗಳನ್ನು ಹಾಗೂ ನ್ಯೂನ್ಯತೆಗಳನ್ನು ತಿದ್ದಿಕೊಳ್ಳುವಲ್ಲಿ ನಮ್ಮ ಮೇಲೆ0ೀ ಪ್ರ0ೋಗಿಸಿದರೆ ಅದು ಒಳ್ಳೆ0ುದೇ.

- 0ಾಚನೆ ಮಾಡುವುದಲ್ಲ. ಭಿಕ್ಷಾ ಪಾತ್ರೆ0ುನ್ನು ಕೈ0ುಲ್ಲಿ ಹಿಡಿದು ತನ್ನ ಒಡೆ0ುನ ಸಮ್ಮುಖದಲ್ಲಿ ತಾನು ಏನು ಬೇಡಬೇಕು ಎಂಬ ಅರಿವಿಲ್ಲದೆ ಒಡೆ0ು ಏನು ನೀಡುವನೋ ಅದನ್ನು ಸ್ವೀಕರಿಸುವ 0ಾಚಕನ ಭಾವ ಪ್ರಾರ್ಥನೆ0ುಲ್ಲಿರಬೇಕು. 0ಾವುದೇ ನಿರೀಕ್ಷೆ ಇರಬಾರದು.ಈ ರೀತಿ ನಾವು ಪ್ರಾರ್ಥಿಸಿದಾಗ ಭೌತಿಕ ರೂಪದ ಗುರುಗಳು ಆ ಭಗವಂತನಿಂದ ದೈವೀ ಶಕ್ತಿ0ುನ್ನು ಪಡೆ0ುುವರು.

- "ನೀವೇ ಎಲ್ಲವನ್ನೂ ನಿಭಾಯಿಸಿರಿ,ನಾನು ಕೇವಲ ನಿಮ್ಮ ಕೈ0ುಲ್ಲಿರುವ ಸಾಧನವಷ್ಟೇ" ಎಂಬ ಮನೋಭಾವದಿಂದ ಗುರುಗಳಲ್ಲಿ ಸಂಪೂರ್ಣ ಶ್ರದ್ಧೆ ಹೊಂದಿದಾಗ ಅಂತಹ ಶ್ರದ್ಧೆ0ು ಈ ಕೆಲಸಗಳನ್ನು ಕೈಗೊಳ್ಳಲು ದೈವೀ ಶಕ್ತಿ0ುನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ.

- ಗುರುಗಳ ಸಾಹಿತ್ಯವನ್ನೋದುವುದರ ಮಹತ್ವ, ಭಾನುವಾರದ ಸತ್ಸಂಗದ ನಂತರ ಪುಸ್ತಕಗಳ ಪ್ರದರ್ಶನ, ಅಭ್ಯಾಸಿಗಳ ಮನೆಗಳಲ್ಲಿ ಗೃಹ ಕೂಟಗಳನ್ನು ನಡೆಸುವುದರ ಬಗ್ಗೆ ಒತ್ತಿ ಹೇಳಿದರು.ನಮ್ಮೆಡೆಗೆ ಗುರುಗಳ ಗಮನವನ್ನು ಸೆಳೆ0ುುವುದರ ಹಿಂದಿನ ರಹಸ್ಯವು ಅವರ ಕಾರ್ಯಗಳಲ್ಲಿ ಭಾಗವಹಿಸುವುದರಲ್ಲಿ0ೀ ಇದೆ ಎಂದರು.

## ತಿರುಪ್ಪೂರ್‌ನಲ್ಲಿ ವಿವಿಧ ಕಾರ್ಯಕ್ರಮಗಳು–ಮಾರ್ಚ್ 2011.

ಸಂಸ್ಥೆ0ು ಜಂಟಿ ಕಾರ್ಯದರ್ಶಿಗಳಾದ ಸಹೋದರ ಎ.ಪಿ.ದೊರೈ ಅವರು ಚೆಟ್ಟಿಪಾಳ್ಯಂ 0ೋಗಾಶ್ರಮದಲ್ಲಿ ಮಾರ್ಚ್ 4 ಮತ್ತು 5ರಂದು ನಡೆಸಿಕೊಟ್ಟ ಸಮ್ಮೇಳನದಲ್ಲಿ ತಮಿಳುನಾಡಿನ ಪ್ರಶಿಕ್ಷಕರು ನೆರೆದಿದ್ದರು.

ಮಾರ್ಚ್ 6ರ ಭಾನುವಾರದ ಬೆಳಗಿನ ಸತ್ಸಂಗವನ್ನು ಸಹೋದರ ಎ.ಪಿ.ದೊರೈ ಅವರು ನಡೆಸಿಕೊಟ್ಟ ನಂತರ ಪೂರ್ಣ ದಿನದ ಕಾರ್ಯಕ್ರಮವು ನಡೆಯಿತು.ಕಾರ್ಯಕ್ರಮದಲ್ಲಿ ಗುಂಪುಚರ್ಚೆಗಳು,ಪ್ರಶ್ನೋತ್ತರಗಳು,ಪ್ರಶಿಕ್ಷಕರಿಂದ ಭಾಷಣಗಳಿದ್ದವು.

ಗುರುಗಳು ತಮ್ಮ ಜನ್ಮ ದಿನೋತ್ಸವವನ್ನು ತಿರುಪ್ಪೂರ್‌ನಲ್ಲಿ ನಡೆಸಲು ಸಮ್ಮತಿ ನೀಡಿರುವುದರಿಂದ ಈ ಕೆಲಸಕ್ಕಾಗಿ ಒಂದು ಸಮಿತಿ0ುನ್ನು ನಿರ್ಮಿಸಲಾಯಿತು.ಈ ಸಮಿತಿ0ು ಸದಸ್ಯರು ವಿಷ0ುಗಳನ್ನು ಚರ್ಚಿಸಲು ಮಾರ್ಚ್ 9ರಂದು ಸೇರಿದ್ದರು,ಸಹೋದರ ಉಮಾಶಂಕರ್ ಬಾಜಪೇಯಿ0ುವರು ಸತ್ಸಂಗವನ್ನು ನಡೆಸಿಕೊಟ್ಟ ನಂತರ ಪರಿಚ0ು ಕಾರ್ಯಕ್ರಮವಿದ್ದಿತು. ಸದಸ್ಯರೆಲ್ಲರೂ ಡಿ.ಜೆ ಪಾರ್ಕ್‌ಗೆ ಭೇಟಿ ನೀಡಿ ಸಿದ್ಧತೆಗಳು ಹಾಗೂ ವಿವಿಧ ವ್ಯವಸ್ಥೆಗಳ ಬಗ್ಗೆ ವಿವಿಧ ವಿಭಾಗದ ಸ್ವ0ುಂಸೇವಕರೊಂದಿಗೆ ಚರ್ಚಿಸಿದರು.

ಇತ್ತೀಚೆಗೆ ಅಭ್ಯಾಸವನ್ನು ಶುರುಮಾಡಿದವರಿಗಾಗಿ ಎ.ಟಿ.ಪಿ ಕಾರ್ಯಕ್ರಮವನ್ನು ಅದೇ ದಿನ ಆ0ೋಜಿಸಲಾಗಿತ್ತು. ಅನೇಕ ಹಳೆ0ು ಅಭ್ಯಾಸಿಗಳೂ ಸಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೊಸ ಅಭ್ಯಾಸಿಗಳೊಂದಿಗೆ ಅವರೂ ಸಹ ಲಾಭ ಹೊಂದಿದರು.

## ತಾರುಣ್ಯ ಆತ್ಮಾವಲೋಕನಕ್ಕೆ ಸಕಾಲ, ನೇಟ್ರಂಪಲ್ಲಿ, ತಮಿಳುನಾಡು.

ಮಾರ್ಚ್ 12 ಮತ್ತು 13ರಂದು ಸುಮಾರು 85 ಅಭ್ಯಾಸಿಗಳಿಗಾಗಿ 0ುವ ಕಾರ್ಯಕ್ರಮವೊಂದನ್ನು ಆ0ೋಜಿಸಲಾಗಿತ್ತು. ಆಶ್ರಮ ನಿರ್ವಾಹಕರಾದ ಸಹೋದರ ಭರತರಾಜನ್‌ರವರು ಮಾತನಾಡಿದ ನಂತರ ಸಹೋದರ ಲಕ್ಷ್ಮೀನಾರಾ0ುಣ್‌ರವರು "ಸಹಜ ಮಾರ್ಗದಲ್ಲಿ 0ುುವಜನರ ಪಾತ್ರ" ದ ಬಗ್ಗೆ ಮಾತನಾಡಿದರು. ಎಲ್ಲಾ ಅಭ್ಯಾಸಿಗಳಿಗೂ "ಸ್ವ0ುಂ ವಿಶ್ಲೇಷಣೆ" ಮಾಡಿಕೊಳ್ಳುವ ಅವಕಾಶ ದೊರೆತದ್ದು ಕಾರ್ಯಕ್ರಮದ ಬಹುಮುಖ್ಯ ಅಂಶವಾಗಿತ್ತು. ಒಬ್ಬ ಅಭ್ಯಾಸಿ0ಾಗಿ ಜ್ಯೋತಿ ಶಾಸ್ತ್ರದಲ್ಲಿ ನಂಬಿಕೆ,ಆಧ್ಯಾತ್ಮಿಕ ವಿವಾಹಗಳ ಪ್ರಾಮುಖ್ಯತೆ, ಸಂಪ್ರದಾ0ುಗಳ ಪ್ರಾಮುಖ್ಯತೆ ಮುಂತಾದ ವಿಷ0ುಗಳ ಕುರಿತ ಗುಂಪು ಚರ್ಚೆ0ು ಅವರನ್ನು ಬಹಳ ಆಳವಾಗಿ 0ೋಚಿಸುವಂತೆ ಹಾಗೂ ತಮ್ಮ ವಿಚಾರಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಮಾಡಿತು. ರಾತ್ರಿ "ಸ್ಪಿರಿಟ್" ಎಂಬ ಸ್ಫೂರ್ತಿದಾ0ುಕ ಪ್ರಾಣಿಗಳ ವ್ಯಂಗ ಚಲನಚಿತ್ರದೊಂದಿಗೆ ಮೊದಲನೆ0ು ದಿನದ ಕಾರ್ಯಕ್ರಮವು ಮುಕ್ತಾ0ುಗೊಂಡಿತು.

"0ುುವಜನತೆ – ಸಹಜಮಾರ್ಗದ ಭವಿಷ್ಯ" ಎನ್ನುವ ಬಗ್ಗೆ ಸಹೋದರ ರಘುಪತಿ0ುವರು ಮಾತನಾಡುವುದರೊಂದಿಗೆ ಎರಡನೆ0ು ದಿನದ ಕಾರ್ಯಕ್ರಮವು ಪ್ರಾರಂಭವಾಯಿತು.ನಂತರ "ಆಧ್ಯಾತ್ಮಿಕ ಸ್ಥಿತಿ0ುನ್ನು ಕಾಪಾಡಿಕೊಳ್ಳುವುದು" ಈ ವಿಷ0ುದ ಬಗ್ಗೆ ಸಹೋದರ ಶ್ರೀರಾಮ್‌ರವರಿಂದ ನಿರೂಪಣೆ0ುದ್ದಿತು. ಕಾರ್ಯಚಟುವಟಿಕೆಗಳ ಬಗೆಗಿನ ತಿಳುವಳಿಕೆ0ುನ್ನು ಪ್ರಶ್ನಾವಳಿ0ು ಮೂಲಕ ಪ್ರತಿಬಿಂಬಿಸಲಾಯಿತು.ಮಧ್ಯಾಹ್ನದ ದೃಶ್ಯಾವಳಿ0ು ಅವರನ್ನು ಎಷ್ಟು ಪ್ರೇರಣೆ ಮಾಡಿತೆಂದರೆ ಸಕಾರಾತ್ಮಕ ಚಿಂತನೆ ಹಾಗೂ ಇಚ್ಛಾಶಕ್ತಿ0ು ಪ್ರಾಮುಖ್ಯತೆ0ು ಬಗ್ಗೆ ಅವರಿಗೆ ಮನವರಿಕೆ0ಾಯಿತು.ಅಭ್ಯಾಸಿಗಳು ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಈ ರೀತಿ0ು ಕಾರ್ಯಕ್ರಮಗಳು ಕನಿಷ್ಟ ಪಕ್ಷ ವರ್ಷಕ್ಕೆ 2 ಬಾರಿ0ಾದರೂ ನಡೆಸಿಕೊಡುವಂತೆ ವ್ಯವಸ್ಥಾಪಕರಲ್ಲಿ ವಿನಂತಿಸಿಕೊಂಡರು.





ಸಂಪುಟ 4 ಸಂಚಿಕೆ 3 ಮೇ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

## ಸ್ನೇಹಕೂಟ ಹಾಗೂ ವಿಚಾರವಿನಿಮಯ, ನೈವೇಲಿ ಕೇಂದ್ರ,ತಮಿಳುನಾಡು.



ನೈವೇಲಿ ಕೆಂದ್ರವು ಮಾರ್ಚ್ 20ರಂದು ಪುದುಚೆರಿಯಲ್ಲಿ ಸ್ನೇಹ ಕೂಟವನ್ನು ಆಯೋಜಿಸಿತ್ತು. ಪುದುಚೆರಿ,ಕುಡ್ಡಲೋರ್,ವಿಲ್ಲುಪುರಂ ಹಾಗೂ ನೆವೇಲಿ ಕೇಂದ್ರಗಳಿಂದ ಸುಮಾರು 100 ಅಭ್ಯಾಸಿಗಳು ಸೇರಿದ್ದರು. ಪುದುಚೆರಿ ಕೇಂದ್ರದಿಂದ "ಧ್ಯಾನದ ಪ್ರಮುಖ್ಯತೆ" ಹಾಗೂ "ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳಿ" , ಕಡಲೋರ್ ಕೇಂದ್ರದಿಂದ "ನಿಮ್ಮನ್ನು ನೀವು ಶಿಸ್ತುಗೊಳಪಡಿಸಿಕೊಳ್ಳಿ", ವಿಲ್ಲುಪುರಂ ಕೇಂದ್ರದಿಂದ "ಚಾರಿತ್ರ್ಯ ನಿರ್ಮಾಣ", ನೈವೇಲಿ ಕೇಂದ್ರದಿಂದ "ನೈತಿಕತೆ ಮತ್ತು ಸದಾಚಾರ" ಈ ವಿಷಯಗಳ ಬಗ್ಗೆ ನಿರೂಪಣೆಗಳು ಹೆಚ್ಚು ಮಾಹಿತಿಯನ್ನು ಹೊಂದಿದ್ದು ಎಲ್ಲರಿಗೂ ಆಳವಾಗಿ ಚಿಂತನ ಮಾಡುವಂತೆ ಪ್ರೇರೇಪಿಸಿದವು. ಇದು ಪ್ರತಿಸ್ಪಂದನವಾಗಿದ್ದು ಎಲ್ಲರೂ ಬಹಳ ಸಕ್ರಿಯವಾಗಿ ಭಾಗವಹಿಸಿದರು.

ಈ ಸ್ನೇಹಕೂಟದಿಂದ ಪ್ರತಿಯೊಬ್ಬರೂ ಎಲ್ಲರನ್ನೂ ಪರಿಚಯಮಾಡಿಕೊಳ್ಳಲು ಹಾಗೂ ಭ್ರಾತೃತ್ವ ಭಾವವನ್ನು ವರ್ಧಿಸಲು ಸಹಾಯವಾಯಿತು.

## ಧ್ಯಾನ ಮಂದಿರದ ಉದ್ಘಾಟನೆ,ತಿರುತುರೈಪೂಂಡಿ,ತಮಿಳುನಾಡು.



ತಿರುತುರೈಪೂಂಡಿ ಕೇಂದ್ರವು ಕಳೆದ ವರ್ಷ 25 ಅಭ್ಯಾಸಿಗಳು ಸಂಸ್ಥೆಯನ್ನು ಸೇರುವುದರೊಂದಿಗೆ ಇಲ್ಲಿ ಸಹಜ ಮಾರ್ಗದ ಪ್ರಾರಂಭವಾಯಿತು.ಅಂದಿನಿಂದಲೂ ಕೇಂದ್ರದಲ್ಲಿ ಭಾನುವಾರದ ಸತ್ಸಂಗವು ನಿಯಮಿತವಾಗಿ ನಡೆದು ಬಂದಿದೆ.

ಮಾರ್ಚ್ 7 ರಂದು ವಲಯ ಮುಖ್ಯಸ್ಥರಾದ ಸಹೋದರ ಪ್ರಕಾಶ್‌ರವರು 40 ಅಭ್ಯಾಸಿಗಳ ಸಮ್ಮುಖದಲ್ಲಿ ಹೊಸ ಧ್ಯಾನ ಮಂದಿರದ ಉದ್ಘಾಟನೆ ಮಾಡಿದರು.ಅಭ್ಯಾಸಿಯೊಬ್ಬರ ಮನೆಯ ಮೊದಲನೇ ಮಹಡಿಯಲ್ಲಿ ಧ್ಯಾನ ಮಂದಿರವಿದೆ. ಮಾರ್ಚ್ 13ರಂದು ಒಂದು ಮುಕ್ತಸಭೆಯನ್ನೂ ಸಹ ನಡೆಸಲಾಯಿತು.ಸಮೀಪದ ಕೇಂದ್ರಗಳ ಪ್ರಶಿಕ್ಷಕರ ಬೆಂಬಲದಿಂದ ಈ ಕೇಂದ್ರವು ಬೆಳೆಯುತ್ತಿರುವುದನ್ನು ನೋಡುವುದು ಬಹಳ ಉತ್ಸಾಹವೆನಿಸುತ್ತದೆ.



## ವಿಚಾರವಿನಿಮಯ, ತೆಂಕಾಸಿ, ತಮಿಳುನಾಡು.

ಫೆಬ್ರವರಿ 27ರಂದು ತೆಂಕಾಸಿ ಕೇಂದ್ರವು ವಿಚಾರವಿನಿಮಯ ಕಾರ್ಯಕ್ರಮವನ್ನು ಆಯೋಜಿಸಿದ್ದಿತು.8 ಜನ ಸಹೋದರರು ಹಾಗೂ 3 ಸಹೋದರಿಯರನ್ನು ಒಳಗೊಂಡಂತೆ 11 ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. "ನಮ್ಮ ಸಂಸ್ಥೆ/ಕೇಂದ್ರವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನಾವು ಹೇಗೆ ಪ್ರಗತಿಹೊಂದಬಹುದಾಗಿದೆ" ಎಂಬುದೇ ಚರ್ಚೆಯ ವಿಷಯವಾಗಿತ್ತು. ನಿಯಮಿತವಾಗಿ ಸಾಧನೆ ಮಾಡುವುದೊಂದೇ ಇದಕ್ಕೆ ದಾರಿ ಏಕೆಂದರೆ ಅದೊಂದರಿಂದ ಮಾತ್ರವೇ ಸಮತೋಲನದ ಅಸ್ತಿತ್ವ ಸಾಧ್ಯ ಎಂದು ಒಮ್ಮತದಿಂದ ನುಡಿದರು. ಎಲ್ಲಾ ಅಭ್ಯಾಸಿಗಳು ಬಹಳ ಸಕ್ರಿಯವಾಗಿ ಭಾಗವಹಿಸಿದ್ದರಿಂದ ವಿಚಾರವಿನಿಮಯವು ಬಹಳ ಚೆನ್ನಾಗಿ ನಡೆಯಿತು.

## ಕಾರ್ಯನಿರ್ವಾಹಕರ ಸಭೆ, ಗುಜರಾತ್.

ಉತ್ತರ ಗುಜರಾತ್ (ವಲಯ 6ಎ)ನ ಸುಮಾರು 50 ಸಂಯೋಜಕ/ಕಾರ್ಯನಿರ್ವಾಹಕರಿಗಾಗಿ ಅಹ್ಮದಾಬಾದ್‌ನ ವಲಯಾಶ್ರಮದಲ್ಲಿ ಏಪ್ರಿಲ್ 9 ಮತ್ತು 10ರಂದು ವಾರ್ಷಿಕ ಸಭೆಯನ್ನು ಆಯೋಜಿಸಲಾಗಿತ್ತು.ಕಳೆದ ವರ್ಷದ ಸಾಧನೆಗಳನ್ನು ಪರಿಶೀಲಿಸುವುದು ಹಾಗೂ 2010–11 ಆರ್ಥಿಕ ವರ್ಷದ ವಿವಿಧ ಚಟುವಟಿಕೆಗಳಿಗಾಗಿ ಹಾಗೂ ಕೇಂದ್ರದ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಾಕಿಕೊಳ್ಳುವುದೇ ಕಾರ್ಯಕ್ರಮದ ಉದ್ದೇಶವಾಗಿತ್ತು. ವಲಯ ಮುಖ್ಯಸ್ಥರಾದ



ಸಹೋದರ ರಾಜೇಶ್ ಅಗರ್ವಾಲ್ ಅವರು ನಾವು ನಮ್ಮ ಗುರುಗಳಲ್ಲಿ ಸಂಪೂರ್ಣ ಶ್ರದ್ಧೆ ಹೊಂದಿದ್ದರೆ ಅದೇ ನಮಗೆ ಸಕಾರಾತ್ಮಕ ಭಾವನೆಯನ್ನು ಹಾಗೂ ಅತ್ಮವಿಶ್ವಾಸವನ್ನು ನೀಡುತ್ತದೆ ಎಂದು ಒತ್ತಿ ಹೇಳಿದರು.

ಕೇಂದ್ರ ಮುಖ್ಯಸ್ಥರು,ಕೇಂದ್ರ ನಿರ್ವಾಹಕರು ಹಾಗೂ ಉಪ–ವಲಯ ಸಂಘಟನಕಾರರಿಂದ ಅನೇಕ ಪ್ರದರ್ಶನಗಳಿದ್ದವು.ಪ್ರತಿಯೊಂದು ಗುಂಪಿನಲ್ಲೂ ಸಂಖ್ಯೆ ಮತ್ತು ಗುಣಮಟ್ಟ ಎರಡರಲ್ಲೂ ಅಭಿವೃದ್ಧಿ ಕುರಿತು ನೀಡಿದ್ದ ಭಾಷಣದ ಬಗ್ಗೆ ಚರ್ಚಿಸಿದರು.

ಎರಡನೆಯ ದಿನ ಪ್ರಬಂಧ ಲೇಖನ ಕಾರ್ಯಕ್ರಮ, ಪುಸ್ತಕ ಪ್ರಕಟನಾ ವಿಭಾಗ, ವಿ.ಬಿ.ಎಸ್.ಸಿ,ಗುರುತಿನ ಚೀಟಿಗಳು,ಆಶ್ರಮದ ಲೆಕ್ಕಾಚಾರಗಳು,ಗೃಹ ಕೂಟಗಳು/ಮುಕ್ತಸಭೆಗಳು, ತರಬೇತಿಗಳು, ಯುವಜನ ಹಾಗೂ ಎಖೋಸ್ ವಾರ್ತಾಪತ್ರ ಮುಂತಾದ ಚಟುವಟಿಕೆಗಳ ಬಗ್ಗೆ ವಲಯ ಸಂಘಟನಾಕಾರರು ನಿರೂಪಣೆಗಳನ್ನು ನೀಡಿದರು.ನಿರೂಪಣೆಯು ಬಹಳ ಪರಿಣಾಮಕಾರಿಯಾಗಿದ್ದಿತು.ಇದೇ ರೀತಿ ಈ ಮುಂದೆ ಪರಿಶೀಲಿಸಿಕೊಳ್ಳಲು ಎಲ್ಲರಿಗೂ ಒಂದು ಮಾರ್ಗದರ್ಶನದ ಕಿರುಹೊತ್ತಿಗೆಯನ್ನು ನೀಡಲಾಯಿತು.

ಸಹೋದರರಾದ ಅಂಕಿತ್ ವ್ಯಾಸ್ ಹಾಗೂ ಕೇಜಲ್ ಕಂಸಾರಾ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.ಎಲ್ಲರಿಗೂ ಇದೇ ಸ್ಫೂರ್ತಿಯಿಂದ ವರ್ಷವಿಡೀ ಇದೇ ಸ್ಫೂರ್ತಿಯನ್ನು ಕಾಪಾಡಿಕೊಳ್ಳುವಂತೆ ಹಾಗೂ ಅದನ್ನು ಇತರ ಸ್ವಯಂ ಸೇವಕರಿಗೂ ಪಸರಿಸುವಂತೆ ವಿನಂತಿಸುತ್ತಾ ಕಾರ್ಯಕ್ರಮವನ್ನು ಮುಗಿಸಿದರು.

ಸಂಪುಟ 4 ಸಂಚಿಕೆ 3 ಮೇ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

# ಪ್ರಭಾ ಕೇಂದ್ರ





ಕೊ0ುಮತ್ತೂರ್‌ನಲ್ಲಿ 1968ರಲ್ಲೇ ಬಾಬೂಜಿ ಮಹಾರಾಜರು ಸಹಜ ಮಾರ್ಗದ ಬೀಜ ಬಿತ್ತಿದ್ದರೂ, 1974ರಲ್ಲಿ ಆರ್.ಎಸ್.ಪುರಂನ ಅಭ್ಯಾಸಿ0ೊಬ್ಬರ ಮನೆಯಿಂದ ಪ್ರಾರಂಭವಾಯಿತು. ನಂತರ ಭಾನುವಾರದ ಸತ್ಸಂಗವನ್ನು 200 ಜನರಿಗೆ ಸ್ಥಳಾವಕಾಶವಿರುವ "ಗೋಲ್ಡ್ ಮಿಸ್ಟ್" ಅಪಾರ್ಟ್‌ಮೆಂಟ್‌ನ ನೆಲಮಾಳಿಗೆಗೆ ಸ್ಥಳಾಂತರಿಸಲಾಯಿತು. 1991ರ ಮೇ 20ರಂದು ಗುರುಗಳು ಈ ಧ್ಯಾನ ಮಂದಿರದ ಉದ್ಘಾಟನೆ ಮಾಡಿದ್ದರು. ತಮ್ಮ ಉದ್ಘಾಟನಾ ಭಾಷಣದಲ್ಲಿ ಮಾತನಾಡುತ್ತಾ ಈ ಕೇಂದ್ರದ ನಿಧಾನ ಪ್ರಗತಿ0ು ಬಗ್ಗೆ ದುಃಖವನ್ನು ವ್ಯಕ್ತಪಡಿಸಿದ್ದರು.



ಕೇರಳದ ಪಶ್ಚಿಮ ಘಟ್ಟದಲ್ಲಿರುವ ಪಾಲಕ್ಕಾಡ್‌ನಿಂದ ಒಂದು ಗಂಟೆ0ು ಪ್ರ0ಾಣದಷ್ಟು ದೂರದಲ್ಲಿರುವ ನಾಚಿಪಾಳ್ಯಂ ಗ್ರಾಮದಲ್ಲಿ 31 ಎಕರೆ0ುಷ್ಟು (16 ಎಕರೆ ಆಶ್ರಮಕ್ಕಾಗಿ) ಭೂಮಿ0ುನ್ನು ಖರೀದಿಸುವುದರೊಂದಿಗೆ ಕೇಂದ್ರವು ಒಮ್ಮೆಲೇ ಮುಂದಕ್ಕೆ ಜಿಗಿಯಿತು. 2000ದ ನವೆಂಬರ್ 1ರಂದು ಈ ಭೂಮಿ0ು ನೋಂದಣಿ0ಾಯಿತು.




ಒಂದು ವಿಶಾಲವಾದ ಹಾಗೂ ಭವ್ಯವಾದ ಧ್ಯಾನಮಂದಿರದ ನಿರ್ಮಾಣವಾಗಿ 2007ರ ಜನವರಿ 5ರಂದು ಗುರುಗಳು ಇದರ ಉದ್ಘಾಟನೆ ಮಾಡಿದರು.ಧ್ಯಾನಮಂದಿರದಲ್ಲಿ ಸುಮಾರು 1000 ಜನರು ಹಾಗೂ ಕಾರಿಡಾರಿನಲ್ಲಿ ಇನ್ನೂ 500 ಜನರು ಸಾವಕಾಶವಾಗಿ ಕುಳಿತುಕೊಳ್ಳಬಹುದಾಗಿದೆ.ಗುರುಗಳು ಮಲಂಪುಳ ಆಶ್ರಮಕ್ಕೆ ಹೊಗಿ ಬರುವಾಗಲೆಲ್ಲಾ ಮಾರ್ಗದಲ್ಲಿರುವ ಈ ಆಶ್ರಮದಲ್ಲಿ ವಿಶ್ರಮಿಸಲು ಬಹಳ ಇಷ್ಟಪಡುತ್ತಾರೆ. ಬಹುಸಂಖ್ಯೆ0ುಲ್ಲಿ ನೆಟ್ಟಿದ್ದ ಮರಗಳೂ ಸಹ ಬಹಳ ಸುಂದರವಾಗಿ ಬೆಳೆ0ುತ್ತಿರಲು ಅಭ್ಯಾಸಿಗಳ ಕಾಲೋನಿ0ುನ್ನು ಸುತ್ತುವರಿದು ಹಸಿರು ದ್ವೀಪದಂತೆ ಕಂಗೊಳಿಸುತ್ತಿದೆ.

ಗುರುಗಳು ಇಲ್ಲಿ ನೀಡಿದ್ದ ಭಾಷಣವೊಂದರಲ್ಲಿ ಹೀಗೆ ಹೇಳಿದ್ದಾರೆ, "ಮೊದಲು ಗುರುಗಳನ್ನು ಪ್ರೀತಿಸಬೇಕು. ನಂತರ ಅವರು ಇದನ್ನು ಮಾಡು ಎಂದು ಹೇಳಿರುವುದರಿಂದ ಧ್ಯಾನ,ಶುದ್ಧೀಕರಣಗಳನ್ನು ಮಾಡಿಕೊಳ್ಳಬೇಕು. ಕೇವಲ ಧ್ಯಾನವು ನಮ್ಮನ್ನು ಗುರಿ0ೆಡೆಗೆ ಕರೆದೊ0್ಯುದು ಎಂಬುದು ನನ್ನ ವೈ0ುಕ್ತಿಕ ಅಭಿಪ್ರಾ0ು, ಏಕೆಂದರೆ ಭಾರತದ ಆಧ್ಯಾತ್ಮಿಕ ಇತಿಹಾಸದಲ್ಲಿ ಸಾವಿರಾರು ವರ್ಷಗಳ ಧ್ಯಾನ ಮಾಡಿದ್ದರೂ ಸಾಧಿಸಲಾಗದ ಜನರೂ ಇದ್ದಾರೆ. ನಾನು ಬಾಬೂಜಿ0ುವರನ್ನು ಕೇಳಿದೆ,ಅವರು "ನೀನು ಸರಿ0ಾಗಿ ಹೇಳುತ್ತಿರುವೆ ಎಂದರು". ನಾನು ಕೇಳಿದೆ, "ಹಾಗಾದರೆ ನೀವು ಈ ಧ್ಯಾನ,ಶುದ್ಧೀಕರಣ ಇವೆಲ್ಲವನ್ನು ಏಕೆ ವಿಧಿಸಿರುವಿರಿ?" ಅವರು ಹೇಳಿದರು, "ವಿಧೇ0ುತೆ. ಜನರಲ್ಲಿ ವಿಧೇ0ುತೆ0ುನ್ನು ಬೆಳೆಸಲು."



25 ಅಭ್ಯಾಸಿಗಳ ಸಾಮಾನ್ಯ ಸಂಖ್ಯೆಯಿಂದ ಪ್ರಾರಂಭವಾಗಿ, ಈಗ ಅಭ್ಯಾಸಿಗಳ ಸಂಖ್ಯೆ0ು 450ಕ್ಕೆ ಹೆಚ್ಚಿದೆ ಹಾಗೂ ಬುಧವಾರದ ಸತ್ಸಂಗವು ಸುಮಾರು 9 ಸ್ಥಳಗಳಲ್ಲಿ ನಡೆ0ುತ್ತಲಿದೆ.ಅನಧಿಕೃತ ವ್ಯವಸ್ಥೆಗಳಾದ ಶ0ುನಶಾಲೆ,ವಾಸಕ್ಕಾಗಿ ಅಭ್ಯಾಸಿಗಳ ನಿಲ0ು ಹಾಗೂ ಗುರುಗಳ ಕಛೇರಿಗಳ ನಿರ್ಮಾಣವು ವಿಚಾರಣೆ0ುಲ್ಲಿದೆ. ಗುರುಗಳು ಹಿಂದೊಮ್ಮೆ ಇಲ್ಲಿ ಈ ಹೊತ್ತಿಗಾಗಲೇ ಇಲ್ಲಿ ಕನಿಷ್ಟಪಕ್ಷ 2000 ಅಭ್ಯಾಸಿಗಳಾದರೂ ಇರಬೇಕಿತ್ತು ಎಂದು ಹೇಳಿದ್ದರು. ಅಭ್ಯಾಸಿಗಳ ಹಾಗೂ ಪ್ರಶಿಕ್ಷಕರ ಪ್ರಾಮಾಣಿಕ ಪ್ರ0ುತ್ನದಿಂದ ಇದು ನಿಜವಾಗಲೆಂದು ಆಶಿಸುತ್ತೇವೆ.

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.